ಡಿಸೆಂಬರ್ 2015, ಸಂಚಿಕೆ 4

*Magazine on Low External Input Sustainable Agriculture*
*Compilation of selected translated articles into Kannada*

ಬಾಹ್ಯ ಪರಿಕರಗಳ ಮಿತ ಬಳಕೆಯ ಸುಸ್ಥಿರ ಕೃಷಿ ಕುರಿತ ಮ್ಯಾಗಜಿನ್.
ಕನ್ನಡಕ್ಕೆ ಅನುವಾದಿಸಿದ ಆಯ್ದ ಲೇಖನಗಳ ಸಂಕಲನ

# LEISA INDIA

## ಲೀಸಾ ಇಂಡಿಯ

ವಿಶೇಷ ಕನ್ನಡ ಸಂಚಿಕೆ



# ಲೀಸಾ ಇಂಡಿಯ

**ವಿಶೇಷ ಕನ್ನಡ ಸಂಚಿಕೆ**

**ಡಿಸೆಂಬರ್ 2015, ಸಂಚಿಕೆ 4**

ಈ ಸಂಚಿಕೆಯು 'ಲೀಸಾ ಇಂಡಿಯ' ಆಂಗ್ಲ ಆವೃತ್ತಿಯಲ್ಲಿ ಪ್ರಕಟವಾದ ಆಯ್ದ ಲೇಖನಗಳ ಅನುವಾದಗಳನ್ನು ಒಳಗೊಂಡಿದೆ.



**ವಿಳಾಸ:** ಎ.ಎಂ.ಇ. ಪ್ರತಿಷ್ಠಾನ
ನಂ.204, 100 ಫೀಟ್ ರಿಂಗ್‌ರೋಡ್
ಮೂರನೇ ಫೇಸ್
ಬನಶಂಕರಿ ಎರಡನೇ ಬ್ಲಾಕ್
ಮೂರನೇ ಸ್ಟೇಜ್
ಬೆಂಗಳೂರು 560085
ದೂರವಾಣಿ+91-080-26699512
26699522
ಫ್ಯಾಕ್ಸ್ +91-080-26699410
ಈ ಮೈಲ್: leisaindia@yahoo.co.in



**ಲೀಸಾ ಇಂಡಿಯ**
'ಲೀಸಾ ಇಂಡಿಯ' ಆಂಗ್ಲ ಆವೃತ್ತಿಯನ್ನು ಎ.ಎಂ.ಇ. ಪ್ರತಿಷ್ಠಾನ ಹಾಗೂ ಇಳೆಯ (ILEIA) ಸಂಸ್ಥೆ ಸಹಯೋಗದೊಂದಿಗೆ ತ್ರೈಮಾಸಿಕವಾಗಿ ಪ್ರಕಟಿಸುತ್ತಿದೆ.



**ಸಂಪಾದಕೀಯ ಮಂಡಳಿ**
**ಮುಖ್ಯ ಸಂಪಾದಕ :** ಕೆ.ವಿ.ಎಸ್.ಪ್ರಸಾದ್
**ವ್ಯವಸ್ಥಾಪಕ ಸಂಪಾದಕಿ :** ಟಿ.ಎಂ.ರಾಧ
**ಕನ್ನಡ ಅನುವಾದ**
ಮಿತ್ರಮಾಧ್ಯಮ ಟ್ರಸ್ಟ್, ಬೆಂಗಳೂರು
**ಕನ್ನಡ ಅನುವಾದಗಳ ಸಮನ್ವಯ**
ಪೂರ್ಣಿಮಾ
**ಕಾರ್ಯ ನಿರ್ವಹಣೆ**
ರುಕ್ಮಿಣಿ ಜಿ.ಜಿ.
**ಪುಟ ವಿನ್ಯಾಸ**
ಬೇಳೂರು ಸುದರ್ಶನ
**ಮುದ್ರಣ**
ಸ್ವಾನ್ ಪ್ರಿಂಟ್, ಬೆಂಗಳೂರು
**ಮುಖಪುಟ ಚಿತ್ರ**
ಹೆಚ್ಚಿನ ಇಳುವರಿ ಪಡೆದ ಎರಗೋಳು ಗ್ರಾಮದ ರೈತ ಶ್ರೀರಾಮಪ್ಪ
**ಚಿತ್ರ ಸೌಜನ್ಯ:** ಎ.ಎಂ.ಇ.ಎಫ್


## ಲೀಸಾ ಮ್ಯಾಗಝೀನ್

**ವಿವಿಧ ಆವೃತ್ತಿಗಳು**
ಲ್ಯಾಟಿನ್ ಅಮೇರಿಕನ್, ಪಶ್ಚಿಮ ಆಫ್ರಿಕನ್ ಮತ್ತು ಬ್ರೆಜಿಲಿಯನ್ ಆವೃತ್ತಿಗಳು

## ಲೀಸಾ ಇಂಡಿಯ ಮ್ಯಾಗಝೀನ್

**ಇತರೆ ಪ್ರಾದೇಶಿಕ ಆವೃತ್ತಿಗಳು**
ಹಿಂದಿ, ಒರಿಯಾ, ಮರಾಠಿ, ಪಂಜಾಬಿ, ತಮಿಳು ಮತ್ತು ತೆಲುಗು


**ಈ ಸಂಚಿಕೆಯಲ್ಲಿ ಪ್ರಕಟವಾದ ವಿಷಯಗಳನ್ನು ಎಲ್ಲಾ ರೀತಿಯ ಎಚ್ಚರಿಕೆಯಿಂದ ಪರಿಶೀಲಿಸಿ ಸಾಧ್ಯವಾದಷ್ಟು ಸರಿಯಾಗಿ ನೀಡಲು ಪ್ರಯತ್ನಿಸಲಾಗಿದೆ. ಹೀಗಿದ್ದೂ, ಅಂತಿಮವಾಗಿ ಇಲ್ಲಿ ಪ್ರಕಟವಾದ ಲೇಖನಗಳಲ್ಲಿರುವ ವಿಷಯಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಇಲ್ಲಿ ಪ್ರಕಟವಾದ ಲೇಖನಗಳ ಪಡಿಯಚ್ಚನ್ನು ಮಾಡಿ ಇತರ ಓದುಗರಿಗೆ ಹಂಚಲು ಸಂಪಾದಕೀಯ ಮಂಡಳಿಯ ಒಪ್ಪಿಗೆಯಿದೆ.**



**ಮಿಸೆರಿಯೊರ್ ನೆರವಿನೊಂದಿಗೆ ಎ.ಎಂ.ಇ. ಪ್ರತಿಷ್ಠಾನದಿಂದ ಪ್ರಕಟಿತ.**


# ಪ್ರಿಯ ಓದುಗರೇ.

**ಪ್ರಿಯ ಓದುಗರೇ,**

**ಬದಲಾಗುತ್ತಿರುವ ಹವಾಗುಣ ಸನ್ನಿವೇಶಗಳನ್ನು ನಿರ್ವಹಿಸಲು ಜೀವವೈವಿಧ್ಯವನ್ನು ಪೋಷಿಸುವುದು ಮತ್ತು ಸಂಪನ್ಮೂಲ ಸಂರಕ್ಷಣೆ ಮಾಡುವುದು ಅತ್ಯಂತ ಮುಖ್ಯ ಎಂಬ ಅಂಶವನ್ನು ರೈತರು ಮನಗಾಣುತ್ತಿದ್ದಾರೆ. ಹಲವು ಪ್ರದೇಶಗಳಲ್ಲಿ ರೈತ ಸಮುದಾಯವು ಎದುರಿಸುತ್ತಿರುವ ಸಮಸ್ಯೆಗಳಿಗೆ ಸಮುದಾಯ ಉಪಕ್ರಮಗಳೇ ಪರಿಹಾರವಾಗಿವೆ; ಅವುಗಳು ಯಶಸ್ಸನ್ನೂ ಕಂಡಿವೆ.**

**ಈ ಸಂಚಿಕೆಯಲ್ಲಿ ವಿವಿಧ ಬಗೆಯ ಸಾಂಪ್ರದಾಯಿಕ ಬೀಜಗಳ ಸಂರಕ್ಷಣೆ ಕುರಿತು ರೈತರ ಉಪಕ್ರಮಗಳು, ಜೀವವೈವಿಧ್ಯವನ್ನು ಮತ್ತು ಸಾಂಪ್ರದಾಯಿಕ ತಳಿಗಳನ್ನು ಸಂರಕ್ಷಿಸಲು ನಡೆಯುವ ಆಹಾರ ಮೇಳಗಳು, ಪಾರಿಸರಿಕವಾಗಿ ದಕ್ಷವಾದ ಮತ್ತು ಸುಸ್ಥಿರವಾದ ವಿಧಾನಗಳನ್ನು ಬಳಸಿಕೊಂಡು ಹಾಗೂ ಸಾಮಾನ್ಯ ಸಂಪನ್ಮೂಲಗಳನ್ನು ಉಳಿಸಿಕೊಂಡು ಸಾಮಾಜಿಕ ಉದ್ಯಮಗಳನ್ನು ರೂಪಿಸುವುದು – ಈ ಕುರಿತ ಲೇಖನಗಳಿವೆ. ಉದಾಹರಣೆಗೆ ಕೇಂದ್ರ ಮತ್ತು ಪೂರ್ವ ಭಾರತದ ವಿವಿಧ ರಾಜ್ಯಗಳ 200ಕ್ಕೂ ಹೆಚ್ಚು ಬುಡಕಟ್ಟು ಗ್ರಾಮಗಳ 600ಕ್ಕೂ ಹೆಚ್ಚು ಆದಿವಾಸಿಗಳು ತಮ್ಮ ಸಾಂಪ್ರದಾಯಿಕ ಆಹಾರದ ಶ್ರೀಮಂತ ವೈವಿಧ್ಯವನ್ನು 1500ಕ್ಕೂ ಹೆಚ್ಚು ಕೃಷಿ ಮಾಡುತ್ತಿರುವ/ ಮಾಡುತ್ತಿರದ ಕಚ್ಚಾ ಮತ್ತು ಬೇಯಿಸಿದ ಆಹಾರದ ಬಗೆಗಳನ್ನು ಪ್ರದರ್ಶಿಸಿದರು. ನೇಪಾಳದ 11 ಸಾವಿರಕ್ಕೂ ಹೆಚ್ಚು ಕುಟುಂಬಗಳು ತಮ್ಮ ಸ್ಥಳೀಯ ಬೀಜಗಳ ಪುನಶ್ಚೇತನದಲ್ಲಿ ತೊಡಗಿವೆ. ಪರ್ಯಾಯ ಮಾದರಿಗಳನ್ನು ಹೇರಿ ಸ್ಥಳೀಯ ಸಂರಕ್ಷಣಾ ಯತ್ನಗಳನ್ನು ಮೆಟ್ಟುವುದಕ್ಕಿಂತ ಈ ಉಪಕ್ರಮಗಳ ಬೆಲೆಯನ್ನು ಅರಿತು ಸೂಕ್ತ ಮನ್ನಣೆ ಮತ್ತು ಬೆಂಬಲ ನೀಡುವುದೇ ಸೂಕ್ತ ಎಂಬುದನ್ನು ಈ ಸಮುದಾಯ ಉಪಕ್ರಮಗಳು ತೋರಿಸಿವೆ. ಮಣ್ಣಿನ ಆರೋಗ್ಯ ಮತ್ತು ನಗರ ತೋಟಗಳ ಪ್ರಾಮುಖ್ಯದ ಬಗ್ಗೆಯೂ ನೀವು ಇಲ್ಲಿ ಲೇಖನಗಳನ್ನು ನೋಡಬಹುದು.**

**ಈ ಲೇಖನಗಳ ಕುರಿತಾಗಿ ನಿಮ್ಮ ಪ್ರತಿಕ್ರಿಯೆ ತಿಳಿಯಲು ಬಯಸುತ್ತೇವೆ. ಈ ಸಂಚಿಕೆಯನ್ನು ನಿಮ್ಮ ಯಾವುದೇ ಕೃಷಿ ಮಿತ್ರರು ಓದಬೇಕು ಎಂದು ನೀವು ಬಯಸಿದರೆ, ಅವರ ಸಂಪೂರ್ಣ ಅಂಚೆ ವಿಳಾಸವನ್ನು ನಮಗೆ ಕಳಿಸಿಕೊಡಿ. ಅವರಿಗೆ ಸಂಚಿಕೆಯನ್ನು ಸಂತೋಷದಿಂದ ಕಳಿಸಿಕೊಡುತ್ತೇವೆ.**

**– ಸಂಪಾದಕರು**

## ಲೀಸಾ LEISA

www.leisaindia.org

ಲೀಸಾ (LEISA)ವು ಬಾಹ್ಯ ಪರಿಕರಗಳ ಮಿತ ಬಳಕೆಯ ಸುಸ್ಥಿರ ಕೃಷಿಯ ಕುರಿತಾಗಿದೆ.ಇದು ಪಾರಿಸರಿಕವಾಗಿ ಯೋಗ್ಯವಾದ ವಿಧಾನದಲ್ಲಿ ತಮ್ಮ ಉತ್ಪಾದಕತೆ ಮತ್ತು ವರಮಾನವನ್ನು ಹೆಚ್ಚಿಸಿಕೊಳ್ಳಲು ಬಯಸುವ ರೈತರಿಗೆ ಇರುವ ತಾಂತ್ರಿಕ ಮತ್ತು ಸಾಮಾಜಿಕ ಆಯ್ಕೆಗಳ ಕುರಿತಾಗಿದೆ. ಲೀಸಾವು ಸ್ಥಳೀಯ ಸಂಪನ್ಮೂಲ ಮತ್ತು ನೈಸರ್ಗಿಕ ವಿಧಾನಗಳ ಹಿತ ಬಳಕೆಯ – ಒಂದೊಮ್ಮೆ ಅಗತ್ಯವೆನಿಸಿದರೆ ಬಾಹ್ಯ ಒಳಸುರಿಗಳ ಸುರಕ್ಷಿತ ಮತ್ತು ದಕ್ಷ ಬಳಕೆಯ – ಕುರಿತಾಗಿದೆ. ಇದು ತಮ್ಮ ಸ್ವಂತ ಜ್ಞಾನ, ಕೌಶಲ್ಯ, ಮೌಲ್ಯ, ಸಂಸ್ಕೃತಿ ಮತ್ತು ಸಂಸ್ಥೆಗಳನ್ನು ಮೂಲವಾಗಿಸಿಕೊಂಡು ಭವಿಷ್ಯವನ್ನು ಕಟ್ಟಿಕೊಳ್ಳಲು ಬಯಸುವ ಪುರುಷ ಮತ್ತು ಮಹಿಳಾ ರೈತರನ್ನು ಸಬಲರನ್ನಾಗಿಸುವುದು ಮತ್ತು ಸಮುದಾಯಗಳ ಕುರಿತಾಗಿದೆ.ಲೀಸಾವು ಕೃಷಿಯನ್ನು ಸುಧಾರಿಸುವ ಮತ್ತು ಅದನ್ನು ಬದಲಾಗುತ್ತಿರುವ ಅಗತ್ಯ ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಹೊಂದಿಸುವ ಕೃಷಿಕರು ಮತ್ತು ಇತರೆ ಪಾತ್ರಧಾರಿಗಳ ಸಾಮರ್ಥ್ಯವನ್ನು ಬಲಪಡಿಸುವ ಭಾಗೇದಾರಿ ವಿಧಾನಗಳ ಕುರಿತಾಗಿದೆ. ಲೀಸಾವು ದೇಸಿ ಮತ್ತು ವೈಜ್ಞಾನಿಕ ಜ್ಞಾನವನ್ನು ಮಿಳಿತಗೊಳಿಸಲು ಬಯಸುತ್ತದೆ ಮತ್ತು ಈ ಕುರಿತ ಹೆಚ್ಚಿನ ಬೆಳವಣಿಗೆಗೆ ಅನುಕೂಲಕರ ವಾತಾವರಣವನ್ನು ಸೃಜಿಸಲು ನೀತಿ ನಿರೂಪಣೆಯ ಮೇಲೆ ಪ್ರಭಾವ ಬೀರಬಯಸುತ್ತದೆ. ಲೀಸಾವು ಒಂದು ಪರಿಕಲ್ಪನೆಯಾಗಿದೆ; ಒಂದು ಮಾರ್ಗ ಮತ್ತು ಒಂದು ರಾಜಕೀಯ ಸಂದೇಶವಾಗಿದೆ.

## ಎ ಎಂ ಇ ಪ್ರತಿಷ್ಠಾನ

www.amefound.org

ಎ ಎಂ ಇ ಪ್ರತಿಷ್ಠಾನವು ಬೇಸಾಯದ ಪರ್ಯಾಯಗಳನ್ನು ರೂಪಿಸುವ, ಕೃಷಿಕರ ಅರಿವನ್ನು ಸಿರಿವಂತಗೊಳಿಸುವ,ಅಭ್ಯುದಯ ಸಂಸ್ಥೆಗಳನ್ನು ಒಗ್ಗೂಡಿಸುವ ಮತ್ತು ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ದಕ್ಷಿಣ ಪ್ರಸ್ಥಭೂಮಿಯ ಅರೆ ಒಣ ಪ್ರದೇಶಗಳ ಸಣ್ಣ ಮತ್ತು ಮಧ್ಯಮ ಕೃಷಿಕರಲ್ಲಿ ಪಾರಿಸರಿಕ ಕೃಷಿಯನ್ನು ಉತ್ತೇಜಿಸುತ್ತಿದೆ.


**ವಿಶ್ವಸ್ಥರು**
**ಚೇರ್ಮನ್** : ಶ್ರೀ ಚಿರಂಜೀವಿ ಸಿಂಗ್, ಐ.ಎ.ಎಸ್. (ನಿ.,)
**ಖಜಾಂಚಿ** : ಶ್ರೀ ಬಿ.ಕೆ. ಶಿವರಾಂ
**ಸದಸ್ಯರು** : ಡಾ.ವಿಠಲ ರಾಜನ್, ಡಾ.ಎಂ.ಮಹಾದೇವಪ್ಪ, ಡಾ.ಎನ್.ಜಿ.ಹೆಗಡೆ, ಡಾ.ಟಿ.ಎಂ. ತ್ಯಾಗರಾಜನ್, ಪ್ರೊ.ವಿ.ವೀರಭದ್ರಯ್ಯ ಡಾ.ಎ.ರಾಜಣ್ಣ, ಡಾ.ವೆಂಕಟೇಶ್ ತಗತ್, ಡಾ.ಸ್ಮಿತಾ ಪ್ರೇಮಚಂದರ್
**ಕಾರ್ಯಕಾರಿ ನಿರ್ದೇಶಕರು:** ಶ್ರೀ ಕೆ.ವಿ.ಎಸ್. ಪ್ರಸಾದ್


## ಮಿಸೆರಿಯೊರ್ MISEREOR

www.misereor.org

ಅಭಿವೃದ್ಧಿ ಸಹಕಾರ ಸಂಘಟನೆ ಮಿಸೆರಿಯೊರ್‌ನ್ನು ಜರ್ಮನ್ ಕ್ಯಾಥೋಲಿಕ್ ಬಿಶಪ್‌ರು ಇಸವಿ 1958ರಲ್ಲಿ ಸ್ಥಾಪಿಸಿದರು. ಕಳೆದ 50 ವರ್ಷಗಳಿಂದ ಮಿಸೆರಿಯೊರ್ ಆಫ್ರಿಕ, ಏಷಿಯಾ, ಹಾಗೂ ಲ್ಯಾಟಿನ್ ಅಮೇರಿಕಾಗಳಲ್ಲಿ ಬಡತನದ ವಿರುದ್ಧದ ಹೋರಾಟಕ್ಕೆ ವಚನಬದ್ಧವಾಗಿದೆ. ಧರ್ಮ, ಪರಂಪರೆ ಅಥವಾ ಲಿಂಗವನ್ನು ಪರಿಗಣಿಸದೆ ಅಗತ್ಯವಿರುವ ಯಾವುದೇ ಮಾನವ ಜೀವಿಗೂ ಮಿಸೆರಿಯೊರ್‌ನ ಸಹಕಾರ ಲಭ್ಯವಿದೆ.

ಬಡವರು ಮತ್ತು ಅನುಕೂಲರಹಿತರು ನಡೆಸುವ ಮತ್ತು ಮಾಲೀಕತ್ವದ ಯೋಜನೆಗಳಿಗೆ ಮಿಸೆರಿಯೊರ್ ಬೆಂಬಲ ಲಭ್ಯವಿದೆ. ಇದು ಸ್ಥಳೀಯ ಪಾಲುಗಾರರ ಜೊತೆ ಕೆಲಸ ಮಾಡಲು ಮೊದಲ ಆದ್ಯತೆ ನೀಡುತ್ತದೆ. ಅವುಗಳೆಂದರೆ ಚರ್ಚ್-ಆಧಾರಿತ ಸಂಸ್ಥೆಗಳು, ಸರಕಾರೇತರ ಸಂಸ್ಥೆಗಳು, ಸಾಮಾಜಿಕ ಚಳುವಳಿಗಳು ಮತ್ತು ಸಂಶೋಧನ ಸಂಸ್ಥೆಗಳು. ಯೋಜನೆಗಳ ಅನುಷ್ಠಾನ ಮತ್ತು ಸ್ಥಳೀಯ ಅಭಿವೃದ್ಧಿ ಪ್ರಕ್ರಿಯೆಯನ್ನು ರಚಿಸುವಲ್ಲಿ ಫಲಾನುಭವಿಗಳ ಜೊತೆಗೂಡಿ ಪಾಲುಗಾರರು ಸಹಾಯಮಾಡುವಲ್ಲಿ ತೊಡಗಿಸಿಕೊಂಡಿದ್ದಾರೆ. ಈ ರೀತಿಯಾಗಿ ಮಿಸೆರಿಯೊರ್ ತನ್ನ ಪಾಲುಗಾರರೊಡಗೂಡಿ ನಿರಂತರವಾಗಿ ಬದಲಾಗುತ್ತಿರುವ ಸವಾಲುಗಳಿಗೆ ಪ್ರತಿಸ್ಪಂದಿಸುತ್ತದೆ.

# ವಿಷಯಸೂಚಿ


## ಸಮುದಾಯಗಳಿಂದ ರಕ್ಷಣೆ – ಸಿಬಿಎಂ ವಿಧಾನ

■ **ಪೀತಾಂಬರ ಶ್ರೇಷ್ಠ ಮತ್ತು ಸಜಲ್ ಸ್ಥಾಪಿತ್** 4

ರೈತರು ತಮ್ಮ ಹೊಲಗಳಲ್ಲಿ ವಂಶವಾಹಿ ಸಂಪನ್ಮೂಲಗಳನ್ನು ಉಳಿಸಿ, ಬಳಸಲು ನೆರವಾಗುವಂತೆ ಲಿ–ಬರ್ಡ್ (LIBIRD) ನೇಪಾಳದ ರೈತರೊಂದಿಗೆ ಸಮುದಾಯ ಆಧಾರಿತ ಜೀವವೈವಿಧ್ಯ ನಿರ್ವಹಣಾ ವಿಧಾನದ ಮೂಲಕ ಕೆಲಸ ಮಾಡುತ್ತಿದೆ. ಇಂದು ನೇಪಾಳದ 11 ಸಾವಿರಕ್ಕೂ ಹೆಚ್ಚು ಮನೆಗಳು ಸ್ಥಳೀಯ ಬೀಜಗಳನ್ನು ಪುನಶ್ಚೇತನಗೊಳಿಸುವ ಮತ್ತು ಸಂರಕ್ಷಿಸುವ ಕೆಲಸದಲ್ಲಿ ತೊಡಗಿವೆ.



## ಸಾಮೂಹಿಕ ಚಟುವಟಿಕೆ, ಬಹುಬಗೆಯ ಲಾಭ

■ **ಪ್ರಮೇಲ್ ಗುಪ್ತಾ**

ಮಧ್ಯಪ್ರದೇಶದ ರೈತರು ಪಾರಿಸರಿಕವಾಗಿ ಸಮರ್ಥವಾದ ಮತ್ತು ಸುಸ್ಥಿರ ವಿಧಾನಗಳನ್ನು ಬಳಸಿಕೊಂಡು ಸಾಮಾಜಿಕ ಉದ್ಯಮಶೀಲತೆಯನ್ನು ರೂಪಿಸಿ ತಮ್ಮ ಬೆಳೆಯ ಪ್ರಮಾಣವನ್ನು ಮತ್ತು ವರಮಾನವನ್ನು ಹೆಚ್ಚಿಸಿಕೊಂಡಿದ್ದಾರೆ. ಸಾಮಾಜಿಕ ಉದ್ಯಮಶೀಲತೆಯ ಮಾದರಿಯು ರೈತರಿಗೆ ಕಡಿಮೆ ಹೂಡಿಕೆಯಲ್ಲಿ ಉತ್ತಮ ವರಮಾನವನ್ನು ಗಳಿಸಲು ಮಾತ್ರವೇ ನೆರವಾಗಿಲ್ಲ; ಜೊತೆಗೆ ಜೀವವೈವಿಧ್ಯವನ್ನು ನಿರ್ಮಿಸುವಲ್ಲೂ ಸಹಕಾರಿಯಾಗಿದೆ. 8

## ಅರಣ್ಯ ಆಹಾರೋತ್ಪನ್ನ ಶ್ರೀಮಂತ ವೈವಿಧ್ಯ

■ **ಭರತ್ ಮನ್ಸತ**

ನಮ್ಮ ಗ್ರಹ ಪ್ರಮುಖ ಬದಲಾವಣೆ ಘಟ್ಟದಲ್ಲಿದೆ. ಮರುಬಳಕೆಯಾಗದ ಪಳೆಯುಳಿಕೆ ಸಂಪನ್ಮೂಲಗಳನ್ನು ಅವಿಶ್ರಾಂತವಾಗಿ ಶೋಷಣೆ ಮಾಡಿದ ನಂತರ, ಬೇಗನೆ ಉಳಿದಿರುವ ಜೈವಿಕ ಸಂಪತ್ತಿನ ಮತ್ತು ಸಂಸ್ಕೃತಿಯನ್ನು ಪುನರುತ್ಪತ್ತಿ ಮಾಡಲೇಬೇಕಿದೆ. 11

## ಮಣ್ಣು ಮಾತಾಡಿದಾಗ

■ **ಪ್ರೊ. ಎಂ. ಮಹದೇವಪ್ಪ**

ನನ್ನ ಈ ಕೋರಿಕೆಯನ್ನು ನೀವು ಊಹಿಸಲಾರಿರಿ. ನನ್ನ ಬಗ್ಗೆ ತಿಳಿಯಬಯಸುವವರಿಗೆ ಸರಿಯಾದ ಪುಸ್ತಕಗಳಿಲ್ಲ. ಪ್ರಸಾರ ಮಾಧ್ಯಮಗಳು ನನ್ನನ್ನು ನಿರ್ಲಕ್ಷಿಸಿವೆ. ಮಕ್ಕಳೇ ಆಗಲಿ. ಯಾವ ವಯಸ್ಸಿನವರೇ ಆಗಲಿ, ಸಿನಿಮಾ ನಟನಟಿಯರ ಬಗ್ಗೆ, ಕ್ರಿಕೆಟ್ ಪಟುಗಳ ಬಗ್ಗೆ ತಿಳಿದುಕೊಂಡಿರುವಷ್ಟು ನನ್ನ ಬಗ್ಗೆ ತಿಳಿದುಕೊಂಡಿಲ್ಲ. 13

## ನಗರ ಮನೆ ತೋಟಗಳು–ಜಾಗದ ಸೂಕ್ತ ಉಪಯೋಗ

■ **ಕೆ ವಿ ಎಸ್ ಪ್ರಸಾದ್** 16

## ಹಸಿರು ಸೇನಾನಿಗಳು

■ **ಶ್ವೇತಾ ಮಿಶ್ರಾ**

ಸಂಪನ್ಮೂಲ ನಿರ್ವಹಣೆಯ ಸಾಂಪ್ರದಾಯಿಕ ಪದ್ಧತಿಗಳು ಸಂರಕ್ಷಣೆಯ ಮೌಲ್ಯ ಮತ್ತು ನೀತಿಗಳನ್ನು ಒಳಗೊಂಡಿದ್ದರೂ, ಅಧಿಕೃತವಾಗಿ ಪರಿಗಣಿಸಲ್ಪಟ್ಟಂಥ ಪದ್ಧತಿಗಳಲ್ಲಿ ಸ್ವಲ್ಪ ಮಟ್ಟಿಗೆ ಕೊರತೆ ಕಂಡುಬರುತ್ತದೆ. ಒರಿಸ್ಸಾದ ದೇವಿ ನದಿ ತಟದಲ್ಲಿ ನಡೆದಿರುವ ಸಾಮುದಾಯಿಕ ಸಂರಕ್ಷಣೆ ಉಪಕ್ರಮಗಳು ಇದನ್ನು ಸೂಚಿಸುತ್ತದೆ.



17



ಚಿತ್ರ: ಪೀತಾಂಬರ ಶ್ರೇಷ್ಠ, ಲಿ-ಬರ್ಡ್

ಸಮುದಾಯ ಬೀಜ ಬ್ಯಾಂಕ್

# ಸಮುದಾಯಗಳಿಂದ ರಕ್ಷಣೆ

# ಸಿಬಿಎಂ ವಿಧಾನ

■ ಪೀತಾಂಬರ ಶ್ರೇಷ್ಠ ಮತ್ತು ಸಜಲ್ ಸ್ಥಾಪಿತ್

**ರೈತರು ತಮ್ಮ ಹೊಲಗಳಲ್ಲಿ ವಂಶವಾಹಿ ಸಂಪನ್ಮೂಲಗಳನ್ನು ಉಳಿಸಿ, ಬಳಸಲು ನೆರವಾಗುವಂತೆ ಲಿ-ಬರ್ಡ್ (LIBIRD) ನೇಪಾಳದ ರೈತರೊಂದಿಗೆ ಸಮುದಾಯ ಆಧಾರಿತ ಜೀವವೈವಿಧ್ಯ ನಿರ್ವಹಣಾ ವಿಧಾನದ ಮೂಲಕ ಕೆಲಸ ಮಾಡುತ್ತಿದೆ. ಇಂದು ನೇಪಾಳದ 11 ಸಾವಿರಕ್ಕೂ ಹೆಚ್ಚು ಮನೆಗಳು ಸ್ಥಳೀಯ ಬೀಜಗಳನ್ನು ಪುನಶ್ಚೇತನಗೊಳಿಸುವ ಮತ್ತು ಸಂರಕ್ಷಿಸುವ ಕೆಲಸದಲ್ಲಿ ತೊಡಗಿವೆ.**

ರೈತರ ಹೊಲಗಳಲ್ಲಿ ಮತ್ತು ಪ್ರಾಕೃತಿಕ ಪ್ರದೇಶಗಳಲ್ಲಿ ಕೃಷಿ ಜೀವವೈವಿಧ್ಯವು ನಾಶವಾಗುತ್ತಿರುವುದು ರೈತ ಸಮುದಾಯವು, ಅದರಲ್ಲೂ ನೇಪಾಳದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿನ ರೈತರು ಎದುರಿಸುತ್ತಿರುವ ಹಲವು ಖಾಯಂ ಸವಾಲುಗಳಲ್ಲಿ ಒಂದಾಗಿದೆ. ಸ್ಥಳೀಯ ವಂಶವಾಹಿ ಸಂಪನ್ಮೂಲಗಳನ್ನು ರಕ್ಷಿಸುವ ಯತ್ನಗಳು ತುಂಬಾ ನಗಣ್ಯವಾಗಿವೆ. ನೇಪಾಳ ಸರ್ಕಾರ ಮತ್ತು ಹಲವು ನಾಗರಿಕ ಸಮಾಜ ಸಂಘಟನೆಗಳು ಆಹಾರ ಉತ್ಪಾದನೆಯನ್ನು ಹೆಚ್ಚಿಸಲು ಸುಧಾರಿತ – ಹೈಬ್ರಿಡ್ ಬೀಜಗಳನ್ನು ಉತ್ತೇಜಿಸುತ್ತಿವೆ. ತಮ್ಮದೇ ಜಾಲದಲ್ಲಿ ಬೀಜಗಳನ್ನು ರಕ್ಷಿಸುವ ಮತ್ತು ವಿನಿಮಯ ಮಾಡಿಕೊಳ್ಳುವ ರೈತರ ಸಾಂಪ್ರದಾಯಿಕ ವಿಧಾನಗಳನ್ನು ಬದಿಗೊತ್ತಿ ಹೀಗೆ ಮಾಡಲಾಗುತ್ತಿದೆ. ಔಪಚಾರಿಕ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದ ರೈತರು ಈ ವೈವಿಧ್ಯವನ್ನು ಬಳಸಿಕೊಳ್ಳಲು ತಮ್ಮದೇ ಜಾಲಗಳನ್ನು ನಂಬಿಕೊಳ್ಳಬೇಕಾದ ಸನ್ನಿವೇಶ ಎದುರಾಗಿದೆ. ವಂಶವಾಹಿ ಸಂಪನ್ಮೂಲಗಳ ಸುಸ್ಥಿರ ಸಂರಕ್ಷಣೆ ಮತ್ತು ಬಳಕೆಗಾಗಿ ಲೋಕಲ್ ಇನಿಶಿಯೇಟಿವ್ಸ್ ಫಾರ್ ಬಯೋಡೈವರ್ಸಿಟಿ ರಿಸರ್ಚ್ ಎಂಡ್ ಡೆವಲಪ್‌ಮೆಂಟ್ (ಲಿ-ಬರ್ಡ್ LIBIRD) ಎಂಬ ನೇಪಾಳದ ಸರ್ಕಾರೇತರ ಸಂಘಟನೆಯು ಸಮುದಾಯ ಆಧಾರಿತ ಜೀವವೈವಿಧ್ಯ ನಿರ್ವಹಣೆ (ಸಿಬಿಎಂ) ಎಂಬ ವಿಧಾನವನ್ನು ನೇಪಾಳದ ವಿವಿಧ ಭೌಗೋಳಿಕ ಪ್ರದೇಶಗಳಲ್ಲಿ 1990ರ ಕೊನೆಯ ವರ್ಷಗಳಿಂದ ನಡೆಸಿಕೊಂಡು ಬಂದಿದೆ.

ಸಿಬಿಎಂ ಎಂಬುದು ಸಾಮೂಹಿಕ ನಿರ್ಣಯ ಪ್ರಕ್ರಿಯೆಯ ಮೂಲಕ ಸುಸ್ಥಿರ ಜೀವನ ನಿರ್ವಹಣೆಗಾಗಿ ಸ್ಥಳೀಯ ವಂಶವಾಹಿ ಸಂಪನ್ಮೂಲಗಳನ್ನು ನಿರ್ವಹಿಸಲು ರೈತ ಸಮುದಾಯವನ್ನು ಸಬಲೀಕರಿಸುವ ಒಂದು ವಿಧಾನವಾಗಿದೆ. ರೈತ ಸಮುದಾಯವನ್ನು ಸಬಲೀಕರಿಸುವುದು, ಕೃಷಿ ಜೀವವೈವಿಧ್ಯವನ್ನು ಸಂರಕ್ಷಿಸುವುದು, ಜೀವವೈವಿಧ್ಯ ಆಧಾರಿತ ಜೀವನ ನಿರ್ವಹಣೆಯನ್ನು ಬೆಂಬಲಿಸುವುದು – ಇವು ಸಿಬಿಎಂ ವಿಧಾನದ ಮೂಲಾಧಾರ ಸೂತ್ರಗಳಾಗಿವೆ. ಸಿಬಿಎಂ ವಿಧಾನವನ್ನು ಬಳಕೆಯಲ್ಲಿರುವ ಸಮುದಾಯ ಸಂರಚನೆಗಳ ಮೇಲೆ ರೈತರ ಆಶೋತ್ತರಗಳನ್ನು ಮತ್ತು

ಸಾಮರ್ಥ್ಯವನ್ನು ಕಟ್ಟಿಕೊಡುವ ವಿಧಾನ ಎಂದೂ ಕರೆಯಬಹುದು. ಈ ವಿಧಾನವು ಲಿ–ಬರ್ಡ್ ಮತ್ತು ನೇಪಾಳ ಕೃಷಿ ಸಂಶೋಧನಾ ಮಂಡಳಿಯು (ನಾರ್ಕ್, NARC) ಜಂಟಿಯಾಗಿ 1998ರಿಂದ 2006ರವರೆಗೆ 'ಆಯಾ ಸ್ಥಳದಲ್ಲೇ ಕೃಷಿ ಜೀವವೈವಿಧ್ಯವನ್ನು ಸಂರಕ್ಷಿಸುವ ವೈಜ್ಞಾನಿಕ ಆಧಾರವನ್ನು ಬಲಗೊಳಿಸುವುದು' ಎಂಬ ಬಯೋಡೈವರ್ಸಿಟಿ ಇಂಟರ್‌ನ್ಯಾಶನಲ್‌ನ ಯೋಜನೆಯ ಫಲಶ್ರುತಿಯಾಗಿದೆ. ಈ ಯೋಜನೆಯನ್ನು ನೇಪಾಳದ ಬೆಗ್ನಾಸ್, ಕಾಸ್ಕಿ, ಕೋಚೋರ್ವಾ, ಬಾರಾ ಪ್ರದೇಶಗಳಲ್ಲಿ ಜಾರಿ ಮಾಡಲಾಗಿತ್ತು.

## ಸ್ವನಿರ್ದೇಶಿತ ನಿರ್ಣಯ ತೆಗೆದುಕೊಳ್ಳಲು ರೈತರ ಸಂಘಟನೆ

2009ರಲ್ಲಿ, ಈ ವಿಧಾನವನ್ನು ಮತ್ತಷ್ಟು ಸುಧಾರಿಸಲು ಮತ್ತು ವಿಸ್ತರಿಸಲು ಲಿ–ಬರ್ಡ್ ಸಂಸ್ಥೆಯು ನಾರ್ವೆಯ ಎನ್‌ಜಿಓ ಆದ 'ದ ಡೆವಲಪ್‌ಮೆಂಟ್ ಫಂಡ್' ಎಂಬ ಸಂಸ್ಥೆಯೊಂದಿಗೆ ಸಹಯೋಗ ಹೊಂದಿತು. ಸಿಬಿಎಂ ವಿಧಾನವನ್ನು ನೇಪಾಳದ ಉನ್ನತ ಗಿರಿಪ್ರದೇಶಗಳಲ್ಲಿ, ಮಧ್ಯಮ ಸ್ತರದ ಗುಡ್ಡ ಪ್ರದೇಶಗಳಲ್ಲಿ ಮತ್ತು ತೆರಾಇ ಬಯಲು ಭೂಮಿಯಲ್ಲಿ ಇರುವ ಇನ್ನೂ 8 ಜಿಲ್ಲೆಗಳಲ್ಲಿ ಜಾರಿಗೊಳಿಸಲಾಯಿತು.

> **ತಿಲ್ಕಿ, ಕಾಲೋನುನಿಯಾ ಶಿವಗಂಜ್ ಎಂಬ ನಶಿಸಿಯೇ ಹೋಗುತ್ತಿದ್ದ ಸುಗಂಧಭರಿತ ಭತ್ತದ ತಳಿಗಳು ಈಗ ಬಹು ಸಾಮಾನ್ಯವಾಗಿ ಬೆಳೆಯುತ್ತಿರುವ ತಳಿಗಳಾಗಿವೆ.**

ಸಾಮೂಹಿಕ ನಿರ್ಣಯ ತೆಗೆದುಕೊಳ್ಳುವುದೇ ಸಿಬಿಎಂನ ಅತಿ ಪ್ರಮುಖ ಅಂಶವಾಗಿದೆ. ಸ್ಥಳೀಯರು ತಮ್ಮ ಸ್ವಂತ ಅಭಿವೃದ್ಧಿಗಾಗಿ ಮತ್ತು ಕೃಷಿ ಜೀವವೈವಿಧ್ಯವನ್ನು ಹೊಲಗಳಲ್ಲಿ ನಿರ್ವಹಣೆ ಮಾಡಿಕೊಳ್ಳಲು ತಾವೇ ಸ್ವತಃ ನಾಯಕತ್ವ ವಹಿಸಿಕೊಳ್ಳಬೇಕು ಎಂದು ಸಿಬಿಎಂ ಭಾವಿಸುತ್ತದೆ. ರೈತರು ತಮ್ಮ ಸ್ವನಿರ್ದೇಶಿತ ಗುರಿಗಳನ್ನು ಅರ್ಥ ಮಾಡಿಕೊಂಡು ಜಾರಿ ಮಾಡಲು ಸಂಘಟಿತರಾದಾಗ ಮಾತ್ರವೇ ಇದು ಸಾಧ್ಯ. ಪ್ರತಿಯೊಂದೂ ಪ್ರದೇಶದಲ್ಲಿ, ರೈತರನ್ನು ವಾರ್ಡ್ ಮಟ್ಟದ ಗುಂಪುಗಳಲ್ಲಿ (ನೇಪಾಳದಲ್ಲಿ ವಾರ್ಡ್ ಎಂದರೆ ಅತಿ ಕೆಳ ಹಂತದ ರಾಜಕೀಯ, ಭೌಗೋಳಿಕ ಘಟಕ) ಸಂಘಟಿಸಲಾಯಿತು. ಈ ಗುಂಪುಗಳನ್ನು ಜೀವವೈವಿಧ್ಯ ಸಂರಕ್ಷಣೆ ಮತ್ತು ಅಭಿವೃದ್ಧಿ ಸಮಿತಿ (ಬಿಸಿಡಿಸಿ) ಎಂಬ ಮುಖ್ಯ ಸಂಘಟನೆಯನ್ನಾಗಿ ಒಗ್ಗೂಡಿಸಲಾಯಿತು. ಇದು ಸ್ಥಳೀಯ ಮಟ್ಟದಲ್ಲಿ ಸಿಬಿಎಂ ಜಾರಿಯ ಕೇಂದ್ರ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತದೆ. ಬಿಸಿಡಿಸಿಯು ತನ್ನ ವಾರ್ಷಿಕ ಚಟುವಟಿಕೆಗಳನ್ನು ಯೋಜಿಸಿಕೊಂಡು ಸ್ಥಳೀಯವಾಗಿಯೇ ದೊರಕುವ ವಂಶವಾಹಿ ಸಂಪನ್ಮೂಲಗಳನ್ನು ಸಂರಕ್ಷಿಸುವ ಮತ್ತು ನಿರಂತರವಾಗಿ ಬಳಸುವ ಪ್ರಕ್ರಿಯೆಯನ್ನು ನೋಡಿಕೊಳ್ಳುತ್ತದೆ.

ರೈತರ ಸಾಮರ್ಥ್ಯವನ್ನು ವೃದ್ಧಿಸುವುದು ಸಿಬಿಎಂನ ಪ್ರಾಥಮಿಕ ಚಟುವಟಿಕೆ ಎಂದು ಪರಿಗಣಿಸಲಾಗಿದೆ. ರೈತರ ಸಂಘಟನೆಗಳು ಕೃಷಿ ಕ್ಷೇತ್ರದಲ್ಲಿನ ಕೃಷಿ ಜೀವವೈವಿಧ್ಯದ ನಿರ್ವಹಣೆಯನ್ನು ಸೂಕ್ತವಾಗಿ ಜಾರಿ ಮಾಡಲು ಯೋಜಿಸುವುದು ಮತ್ತು ರೈತರ ಜೀವನನಿರ್ವಹಣೆಯನ್ನು ಸುಧಾರಿಸುವುದು – ಇವು ಸಿಬಿಎಂನ ಸಾಮರ್ಥ್ಯ ಅಭಿವೃದ್ಧಿಯ ಸಹಜ ಉದ್ದೇಶಗಳಾಗಿವೆ.

ಈವರೆಗೆ 11 ಸಾವಿರಕ್ಕೂ ಹೆಚ್ಚು ಮನೆಗಳನ್ನು ಬಿಸಿಡಿಸಿಯಡಿ ತರಲಾಗಿದೆ; ಇವರೆಲ್ಲರೂ ನೇಪಾಳದಾದ್ಯಂತ ಸಿಬಿಎಂನ ವಿಧಾನವನ್ನು ಜಾರಿಗೊಳಿಸುವುದರಲ್ಲಿ ತೊಡಗಿದ್ದಾರೆ. ಈ ಸದಸ್ಯರ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ.

## ಸಮುದಾಯ ಬೀಜ ಬ್ಯಾಂಕ್‌ಗಳು

ರೈತರು ತಮ್ಮ ಸಹರೈತರು ಪರಿಚಯಿಸುವುದನ್ನು, ಮಾರುಕಟ್ಟೆ ಶಕ್ತಿಗಳನ್ನು ಅನುಸರಿಸುವ ಪ್ರವೃತ್ತಿ ಹೊಂದಿರುವುದರಿಂದ ಮತ್ತು



ಚಿತ್ರ: ಲಿ–ಬರ್ಡ್

ಜೀವ ವೈವಿಧ್ಯ ಹಬ್ಬ

ಇತರೆ ಹಲವು ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದಾಗಿ ಹಲವು ಸ್ಥಳೀಯ ತಳಿಗಳು ಮತ್ತು ವಂಶವಾಹಿಗಳು ನಾಶವಾಗಿವೆ. ಇನ್ನೂ ಹಲವು ತಳಿಗಳು ವಿನಾಶದ ಅಂಚಿನಲ್ಲಿವೆ. ಆದ್ದರಿಂದ ಜೀವವೈವಿಧ್ಯವು ಹೆಚ್ಚಾಗಿರುವ ಮತ್ತು ಕಡಿಮೆ ಪ್ರದೇಶವಿರುವ ಕೃಷಿಕರ ಹೊಲಗಳಲ್ಲಿಯೇ ಕೃಷಿ ಜೀವವೈವಿಧ್ಯದ ನಿರ್ವಹಣೆ ಮಾಡುವುದನ್ನು ಉತ್ತೇಜಿಸಲಾಗಿದೆ. ಜೀವವೈವಿಧ್ಯದಲ್ಲಿ ಬಡವಾಗಿರುವ ಪ್ರದೇಶಗಳಲ್ಲಿ ಹೊಸ ತಳಿಗಳನ್ನು ಮತ್ತು ಮರಗಳನ್ನು ಪರಿಚಯಿಸಿ ವ್ಯವಸ್ಥೆಯಲ್ಲಿ ಸಹಿಷ್ಣುತೆಯನ್ನು ಸಾಧಿಸಲು ಯತ್ನಿಸಲಾಗಿದೆ. ವಿವಿಧ ಬಗೆಯ ಬೀಜಗಳನ್ನು ಹೊಂದುವುದು, ನಾಟಿ ಮಾಡುವ ಸಸಿಗಳನ್ನು ಮತ್ತು ಪ್ರಾಣಿಗಳ ತಳಿಗಳನ್ನು ರೈತರ ನಿಯಂತ್ರಣದಲ್ಲಿಯೇ ಇಡುವ ಗುರಿ ಹೊಂದಲಾಗಿದೆ.

ಸಿಬಿಎಂ ವಿಧಾನದಲ್ಲಿ ಮೊದಲ ಹಂತದಲ್ಲಿ ಬಾಹ್ಯ ಸಂಸ್ಥೆಗಳು ಈ ಪ್ರಕ್ರಿಯೆಗೆ ಸಹಕರಿಸಿದರೆ, ನಂತರದಲ್ಲಿ ಸಮುದಾಯ ಸದಸ್ಯರಿಗೆ ಸ್ಥಳೀಯ ವಂಶವಾಹಿ ಸಂಪನ್ಮೂಲಗಳ ದಾಖಲೀಕರಣದಲ್ಲಿ



ಚಿತ್ರ: ಲಿ-ಬರ್ಡ್

ತಾರೋ ವೈವಿಧ್ಯ ಬ್ಲಾಕ್

ತೊಡಗಲು, ಸಂಬಂಧಿತ ಸಾಂಪ್ರದಾಯಿಕ ಜ್ಞಾನ ಮತ್ತು ಮಾಹಿತಿಗಳನ್ನು ಸಂಗ್ರಹಿಸಲು ಸೂಕ್ತ ತರಬೇತಿ ನೀಡಲಾಗುತ್ತದೆ. ಇಂಥ ಅಂಕಿ-ಅಂಶಗಳ ಮಾಹಿತಿಯು ಕೇವಲ ಸಾಮಾನ್ಯ, ಅಪರೂಪದ ಮತ್ತು ವಿಶಿಷ್ಟ ವಂಶವಾಹಿ ಸಂಪನ್ಮೂಲಗಳನ್ನು ಗುರುತಿಸಲಷ್ಟೇ ಅವಶ್ಯಕವಲ್ಲ; ಜೊತೆಗೆ ಆ ಪ್ರದೇಶದಲ್ಲಿ ದೊರಕುವ ವಂಶವಾಹಿ ಸಂಪನ್ಮೂಲಗಳ ಸಾಮರ್ಥ್ಯವನ್ನು ಅಳೆಯುವುದಕ್ಕೂ ಸಹಕಾರಿಯಾಗಿದೆ. ಸಹಭಾಗಿತ್ವದ ನಾಲ್ಕು-ಕೋಶಗಳ ವಿಶ್ಲೇಷಣಾ ವಿಧಾನವನ್ನು ಇಲ್ಲಿ ಪ್ರತಿಯೊಂದೂ ಸಿಬಿಎಂ ಪ್ರದೇಶದ ಕೃಷಿ ಜೀವವೈವಿಧ್ಯವನ್ನು ಅಳೆಯುವುದಕ್ಕಾಗಿ ಅಳವಡಿಸಿಕೊಳ್ಳಲಾಗಿದೆ; ಹಾಗೆಯೇ ಇದರಿಂದ ಸ್ಥಳೀಯ ಬೆಳೆ ಪ್ರಮಾಣಗಳ ಬದಲಾವಣೆಯನ್ನು ತಿಳಿಯಲೂ ಬಳಸಲಾಗುತ್ತಿದೆ. ಇಂಥ ಅಧ್ಯಯನದ, ವಿಶ್ಲೇಷಣೆಯ ಮತ್ತು ವಿಸ್ತರಿತ ಜ್ಞಾನದ ಆಧಾರದ ಮೇಲೆ ನಿರ್ದಿಷ್ಟ ಬೆಳೆಗಾಗಿ ಅಥವಾ ತಳಿಗಾಗಿ ಅಥವಾ ವಂಶಕ್ಕಾಗಿ ಸಿಬಿಎಂ ಯೋಜನೆಯನ್ನು ಸಿದ್ಧಪಡಿಸಲಾಗುತ್ತದೆ.

ಸಮುದಾಯ ಬೀಜ ಬ್ಯಾಂಕ್‌ನ್ನು (ಕಮ್ಯುನಿಟಿ ಸೀಡ್ ಬ್ಯಾಂಕ್ CSB) ಇಲ್ಲಿ ಕೃಷಿ ಜೀವವೈವಿಧ್ಯದ ಹೊಲ ನಿರ್ವಹಣೆಯ ಪ್ರಧಾನ ಚಟುವಟಿಕೆ ಎಂದು ಪರಿಗಣಿಸಲಾಗಿದೆ. ಈವರೆಗೂ 15 ಸಮುದಾಯ ಬೀಜ ಬ್ಯಾಂಕ್‌ಗಳನ್ನು ನೇಪಾಳದ ವಿವಿಧ ಭೌಗೋಳಿಕ ಪ್ರದೇಶಗಳಲ್ಲಿ ಲಿ-ಬರ್ಡ್‌ನ ಹಣಕಾಸು ಮತ್ತು ತಾಂತ್ರಿಕ ಬೆಂಬಲದಿಂದ ಸ್ಥಾಪಿಸಲಾಗಿದೆ. ಮಾರುಕಟ್ಟೆಗಳು ಕೆಲವೇ ತಳಿಗಳನ್ನು ಮಾರುವುದರಿಂದ, ಈ ಸಿಬಿಎಸ್‌ಗಳು ಸ್ಥಳೀಯ ಮಟ್ಟದಲ್ಲಿ ವೈವಿಧ್ಯಮಯ ಬೀಜಗಳನ್ನು ದೊರಕಿಸಲು ಸಹಕಾರ ನೀಡುತ್ತವೆ. ಇಂಥ ಸಿಬಿಎಸ್‌ಗಳಲ್ಲಿ ಸ್ಥಳೀಯ ತಳಿಗಳ ಸುಮಾರು 1195 ಬಗೆಯ ಬೀಜಗಳನ್ನು ಸಿಬಿಎಸ್‌ಗಳಲ್ಲಿ ಸಂರಕ್ಷಿಸಲಾಗಿದೆ. ವಾರ್ಷಿಕ ಸುಮಾರು 2000 ರೈತರು ಈ ಸಮುದಾಯ ಬೀಜ ಬ್ಯಾಂಕುಗಳಲ್ಲಿ ಸಿಗುವ ಸ್ಥಳೀಯವಾದ ಬಗೆಬಗೆಯ ಬೀಜಗಳನ್ನು ಬಳಸುತ್ತಾರೆ.

## ಗ್ರಾಮೀಣ ಜೀವನನಿರ್ವಹಣೆಯ ವಿಸ್ತರಣೆ

ಸ್ಥಳೀಯ ತಳಿಗಳು ಮತ್ತು ವಂಶಗಳ ಸಂರಕ್ಷಣೆಗೆ ಆರ್ಥಿಕ ಉತ್ತೇಜಕಗಳನ್ನು ನೀಡುವ ಹಿನ್ನೆಲೆಯಲ್ಲಿ ಸಿಬಿಎಂ ವಿಧಾನವು ಜೀವವೈವಿಧ್ಯ ಆಧಾರದ ವರಮಾನ ಉತ್ಪಾದನಾ ಆಯ್ಕೆಗಳನ್ನು ಪ್ರೋತ್ಸಾಹಿಸುತ್ತದೆ. ಸ್ಥಳೀಯ ವಂಶವಾಹಿ ಸಂಪನ್ಮೂಲಗಳ ಮೌಲ್ಯ ಮತ್ತು ಅವುಗಳ ಸಾಮರ್ಥ್ಯದ ವಿಶ್ಲೇಷಣೆಗಳನ್ನು ಆಧರಿಸಿ, ಬೀಜ ಉತ್ಪಾದನೆ, ಸ್ಥಳೀಯ ಪ್ರಾಣಿಗಳ ಸಂತತಿ ಹೆಚ್ಚಿಸುವುದು, ತಳಿ ಶುದ್ಧೀಕರಣ, ಸ್ಥಳೀಯ ಮತ್ತು ಸಾಂಪ್ರದಾಯಿಕ ಆಹಾರ ಪದಾರ್ಥಗಳ ಮೌಲ್ಯವರ್ಧನೆ ಮತ್ತು ಮಾರುಕಟ್ಟೆ, ಹೊಸ ಸಂಸ್ಕರಣಾ ಘಟಕಗಳ ಸ್ಥಾಪನೆ ಮತ್ತು ಇತರೆ ಸಣ್ಣ ಉದ್ದಿಮೆಗಳನ್ನು ವಿನ್ಯಾಸಗೊಳಿಸಲಾಗುತ್ತದೆ. ಇವುಗಳು ವೈಯಕ್ತಿಕ ಮಟ್ಟ ಹಾಗೂ ಸಾಮುದಾಯಿಕ – ಹೀಗೆ ಎರಡೂ ಹಂತಗಳಲ್ಲಿ ಇರುತ್ತವೆ. ಉತ್ಪನ್ನಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲು ಮತ್ತು ಉತ್ಪಾದನಾ ವಿಧಾನವನ್ನು ಸುಸ್ಥಿರವಾಗಿ ಇಟ್ಟುಕೊಳ್ಳಲು ಬೇಕಾದ ಜ್ಞಾನ ಮತ್ತು ಕೌಶಲ್ಯಗಳ ಕುರಿತ ಚಟುವಟಿಕೆಗಳನ್ನು ನಡೆಸಲಾಗುತ್ತದೆ.

ಸಿಬಿಎಂನಿಂದ ಕಂಡುಬಂದ ಯಶಸ್ಸು, ಹೊಸ ಮಾರ್ಗಗಳು ಮತ್ತು ಪರಿವರ್ತನೆಗಳು ವೈವಿಧ್ಯಮಯವಾಗಿವೆ ಮತ್ತು ಗಮನಾರ್ಹವಾಗಿದೆ. ಸ್ಥಳೀಯ ಸುಗಂಧಭರಿತ ಅಕ್ಕಿ ತಳಿಗಳಾದ ತಿಲ್ಕಿ ಮತ್ತು ಕಾಲೋನುನಿಯಾಗಳು ಅನುಕ್ರಮವಾಗಿ ಡಂಗ್ ಜಿಲ್ಲೆಯ ರಾಮ್‌ಪುರದಿಂದ ಮತ್ತು ಝೂಪಾ ಜಿಲ್ಲೆಯ ಶಿವಗಂಜ್‌ನಿಂದ ಕಣ್ಮರೆಯಾಗುವ ಹಂತದಲ್ಲಿದ್ದವು. ಈಗ ಅವು ಸಹಜವಾಗಿ ಎಲ್ಲರೂ ಬೆಳೆಯುವ ತಳಿಗಳಾಗಿವೆ. ಜನರು ಈಗ ಈ ತಳಿಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ವರಮಾನ ಗಳಿಸಲು ಶಕ್ತರಾಗಿದ್ದಾರೆ. ಕುಂಜೋ ಮತ್ತು ಮಸ್ತಾಂಗ್‌ನಲ್ಲಿ ಸ್ಥಳೀಯ ಕೋಳಿಗಳ ಪ್ರಮಾಣವು ಹೆಚ್ಚಾಗಿದೆ. ರೈತರು ಈ ಪ್ರದೇಶಗಳಲ್ಲಿ ಮೆಣಸಿನಕಾಯಿ ಉತ್ಪನ್ನದಲ್ಲಿ ಸ್ವಾವಲಂಬಿಗಳಾಗಿದ್ದಾರೆ; ಈ ಹಿಂದೆ ಅವರು ಇದನ್ನು ಮಾರುಕಟ್ಟೆಯಲ್ಲಿ ಖರೀದಿಸುತ್ತಿದ್ದರು. ನವಲ್‌ಪರಸಿಯ ಅಗ್ಯೌಲಿಯಲ್ಲಿ ಅಪರೂಪದ ಹುರ್ರಾ ಎಂಬ ಹಂದಿ ತಳಿಯು ಹೆಚ್ಚು ಜನಪ್ರಿಯವಾಗಿದ್ದು ಮಾಝಿ ಮತ್ತು ಬೋಟೆ ಎಂಬ ಸ್ಥಳೀಯ ಸಮುದಾಯಗಳ 100ಕ್ಕೂ ಹೆಚ್ಚು ಮನೆಗಳ ಪ್ರಮುಖ ವರಮಾನದ ಮೂಲವಾಗಿದೆ. ಅದೇ ಹಳ್ಳಿಯಲ್ಲಿ ಸಮುದಾಯಗಳು ಒಟ್ಟಿಗೆ ಬಂದು 10 ಹೆಕ್ಟೇರುಗಳಿಗೂ ಹೆಚ್ಚಿನ ಪ್ರದೇಶವನ್ನು ಗೋಮಾಳವಾಗಿ ಪುನರ್‌ರೂಪಿಸುವಲ್ಲಿ ಯಶ ಪಡೆದಿದ್ದಾರೆ; ಇದು ಈ ಮೊದಲು ನೆರೆಯಿಂದ ಹಾಳಾಗಿತ್ತು. ಈಗ ಈ ಪ್ರದೇಶವು ಕೃಷಿಕರ ಮನೆಗಳಿಗೆ ಪಶು ಆಹಾರ ಮತ್ತು ಹುಲ್ಲಿನ ಸುರಕ್ಷೆಯನ್ನು ಒದಗಿಸಿದೆ.

ಜುಮ್ಲಾದ ತಾಲಿಯಂನಲ್ಲಿ ಸಿಬಿಎಂ ಮಹಿಳೆಯರ ಶ್ರಮವನ್ನು ತಗ್ಗಿಸುವಲ್ಲಿ ಪರಿಣಾಮಕಾರಿ ಪಾತ್ರವನ್ನು ವಹಿಸಿದೆ. ಈ ಪ್ರದೇಶದಲ್ಲಿ ಸಾಮಾನ್ಯವಾಗಿ ಬೇಲಿಗೆಂದು ಬಳಸುವ ಮತ್ತು ಖಾದ್ಯ ಎಣ್ಣೆಗಾಗಿ ಬೀಜವನ್ನು ಸಂಗ್ರಹಿಸಲು ಧಾತೇಲೋ ಎಂಬ ಸ್ಥಳೀಯ ಗಿಡವನ್ನು ಬೆಳೆಯುತ್ತಾರೆ. ಈ ಬೀಜಗಳಿಂದ ಎಣ್ಣೆಯನ್ನು ತೆಗೆಯುವುದು ತುಂಬಾ ಕಷ್ಟದ ಕೆಲಸವಾಗಿತ್ತು; ಬೀಜದ ಸಂಗ್ರಹಕ್ಕಾಗಿ ಮಹಿಳೆಯರು ಹಲವು ಗಂಟೆಗಳ ಕಾಲ ಸುತ್ತಾಡಬೇಕಿತ್ತು. ಅದರಲ್ಲೂ ಹೆಚ್ಚಿನ ಪ್ರಮಾಣದಲ್ಲಿ ಬಡ ಕುಟುಂಬಗಳ ಮಹಿಳೆಯರು ಬೀಜವನ್ನು ಸಂಗ್ರಹಿಸಿ ತಮ್ಮ ಕೈಯಿಂದಲೇ ಎಣ್ಣೆ ತೆಗೆಯುತ್ತಿದ್ದರು. ಈ

ಸಾಂಪ್ರದಾಯಿಕ ವಿಧಾನದಿಂದ 2 ಲೀಟರ್ ಎಣ್ಣೆ ತೆಗೆಯುವುದಕ್ಕೆ ಒಬ್ಬ ಮಹಿಳೆಗೆ ಒಂದು ದಿನ ಬೇಕಾಗುತ್ತಿತ್ತು. ಈಗ ಸಿಬಿಎಂನ ಬೆಂಬಲ ಮತ್ತು ಸಮುದಾಯದ ಯತ್ನಗಳಿಂದಾಗಿ ಪರಿಸ್ಥಿತಿ ಬದಲಾಗಿದೆ. ಈಗ ಎಣ್ಣೆ ತೆಗೆಯುವ ಯಂತ್ರವು ಸ್ಥಾಪನೆಯಾಗಿದೆ. ಈಗ ಈ ಯಂತ್ರಗಳಿಂದ 10 ಕಿಲೋ ಧಾತೆಲೋ ಬೀಜವನ್ನು ಜಜ್ಜಿ ಕೇವಲ 30 ನಿಮಿಷಗಳಲ್ಲಿ 3ರಿಂದ 5 ಕಿಲೋ ಎಣ್ಣೆಯನ್ನು ತೆಗೆಯಬಹುದಾಗಿದೆ. ಇದು ಮಹಿಳೆಯರ ಮೇಲಿನ ಕೆಲಸದ ಹೊರೆಯನ್ನು ತಗ್ಗಿಸಿದ್ದಷ್ಟೇ ಅಲ್ಲ, ಎಣ್ಣೆಯನ್ನು ಮಾರುವುದರಿಂದ ಈ ಮಹಿಳೆಯರ ವರಮಾನವು ಹೆಚ್ಚಾಗಿದೆ. ಧಾತೆಲೋ ಬಗ್ಗೆ ಕೇವಲ ಮಹಿಳೆಯರಷ್ಟೇ ಅಲ್ಲ, ಪುರುಷರಿಗೂ ಆಸಕ್ತಿ ಬಂದಿದೆ. ಹಳ್ಳಿಯ ಹತ್ತಿರದ ಪ್ರದೇಶದಲ್ಲಿ ಗ್ರಾಮಸ್ಥರು ಒಟ್ಟಾಗಿ ಸೇರಿ 2200 ಸಸಿಗಳನ್ನು ನೆಟ್ಟಿದ್ದಾರೆ. ಉತ್ತಮ ಬೇರು ಜಾಲವನ್ನು ಹೊಂದಿರುವ ಧಾತೆಲೋ ಸಸ್ಯವನ್ನು ಭೂಕುಸಿತವನ್ನು ತಡೆಯುವುದಕ್ಕಾಗಿಯೂ ಬಳಸುತ್ತಾರೆ.

## ಸಿಬಿಎಂನ್ನು ಸುಸ್ಥಿರಗೊಳಿಸುವುದು

ಸ್ಥಳೀಯ ಹಣಕಾಸಿನ ನೆರವಿನಿಂದ ಸಿಬಿಎಂ ನಿಧಿಯನ್ನು ರೂಪಿಸಲಾಗಿದೆ. ಇಲ್ಲಿ ಸಮುದಾಯದ ಮತ್ತು ಲಿ–ಬರ್ಡ್‌ನ ಮೂಲಕ ಕೊಡುಗೆ ಸಂಗ್ರಹಿಸಲಾಗಿದೆ. ಸಿಬಿಎಂ ನಿಧಿಯು ಒಂದು ಆವರ್ತಕ ನಿಧಿ; ಇದನ್ನು ರೈತ ಸಂಘಟನೆಯು ನಿರ್ವಹಿಸುತ್ತದೆ; ಇದರ ಮೂಲಕ ಬಡ ರೈತರಿಗೆ ಚಿಕ್ಕ ಪ್ರಮಾಣದಲ್ಲಿ ಸಾಲವನ್ನು ನೀಡಲಾಗುತ್ತದೆ. ಹೆಚ್ಚುವರಿ ಕೃಷಿ ಆಧಾರಿತ ಜೀವನ ನಿರ್ವಹಣೆ ವಿಧಾನಗಳಲ್ಲಿ ಹೂಡಿಕೆ ಮಾಡುವುದರಿಂದ ಈ ರೈತರು ಮನೆಯ ವರಮಾನವನ್ನು ಮತ್ತು ಆರ್ಥಿಕ ಸಹಿಷ್ಣುತೆಯನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ಈ ನಿಧಿಯ ಬಡ್ಡಿಯ ಮೂಲಕ ರೈತ ಸಂಘಟನೆಯ ಕಾರ್ಯಾಚರಣಾ ವೆಚ್ಚಗಳನ್ನು ನಿಭಾಯಿಸಲಾಗುವುದು. ಇದರಲ್ಲಿ ಸ್ಥಳೀಯ ತಳಿಗಳ ಬೀಜಗಳನ್ನು ಪುನರುತ್ಪಾದಿಸುವ ಮತ್ತು ವಿತರಿಸುವ ಚಟುವಟಿಕೆಯೂ ಸೇರಿದೆ.

21 ಹಳ್ಳಿಗಳಲ್ಲಿ ಸ್ಥಾಪಿಸಿದ ಸಿಬಿಎಂ ನಿಧಿಯ ಒಟ್ಟು ಮೊತ್ತವು ಈಗ 1 ಲಕ್ಷ ಅಮೆರಿಕನ್ ಡಾಲರ್‌ಗಳನ್ನು (ಅಂದರೆ ಸುಮಾರು 60 ಲಕ್ಷ ರೂ.ಗಳು) ದಾಟಿದೆ. ವಾರ್ಷಿಕವಾಗಿ 2000 ಸದಸ್ಯರು ಸಣ್ಣ ಉದ್ಯಮವನ್ನು ಆರಂಭಿಸಿ ತಮ್ಮ ಮನೆಯ ಆರ್ಥಿಕತೆಯನ್ನು ನಿರ್ವಹಿಸಲೆಂದು ಈ ನಿಧಿಯಿಂದ ಚಿಕ್ಕ ಪ್ರಮಾಣದ ಸಾಲವನ್ನು ಪಡೆಯುತ್ತಾರೆ. ಅಂಕಿ ಅಂಶಗಳನ್ನು ಗಮನಿಸಿದಾಗ ಇವರಲ್ಲಿ ಶೇಕಡಾ 50ಕ್ಕಿಂತ ಹೆಚ್ಚಿನವರು ಸಂಪನ್ಮೂಲದಲ್ಲಿ ಬಡವರು. ಸಿಬಿಎಂ ನಿಧಿಯು ಈಗ ಹಣಕಾಸು ಸಂಪನ್ಮೂಲವನ್ನು ನಿರ್ಮಿಸುವ ಖಾಯಂ ಮೂಲವಾಗಿದೆ; ಸಿಬಿಎಂ ಚಟುವಟಿಕೆಗಳನ್ನು ಮತ್ತು ಸಾಂಸ್ಥಿಕ ಸುಸ್ಥಿರತೆಯನ್ನು ಸ್ಥಾಪಿಸುವಲ್ಲಿಯೂ ಅದು ನೆರವಾಗಿದೆ.

■ **Pitambar Shrestha (Pitambar@libird.org) and Sajal Sthapit (ssthapit@libird.org)**
work at Local Initiatives for Biodiversity, Research and Development (LI-BIRD). PO Box 324, Gairapatan, Pokhara, Kaski Nepal. For more information, please visit www.libird.org

**ಆಂಗ್ಲ ಮೂಲ**
ಲೀಸಾ ಇಂಡಿಯಾ, ಸಂಪುಟ 16, ಸಂಚಿಕೆ 1, ಮಾರ್ಚ್ 2014

# www.leisaindia.org

A website for learning and sharing experiences on LEISA practices.

## Main features

- Space to share your LEISA experience
- A source for LEISA practices followed by farmers
- An archive of LEISA India magazines - English edition and regional editions (Tamil, Kannada, Hindi, Oriya and Telugu)
- Photos and videos on LEISA practices
- Interesting cases of people following LEISA practices



# ಸಾಮೂಹಿಕ ಚಟುವಟಿಕೆ, ಬಹುಬಗೆಯ ಲಾಭ

## ಸಾಮಾಜಿಕ ಉದ್ಯಮಶೀಲತೆ ಮಾದರಿಯ ಒಂದು ಉದಾಹರಣೆ



ಜೈವಿಕ ಕೀಟನಾಶಕಗಳ ಬಳಕೆಯಿಂದಾಗಿ ಲೇಡಿಬರ್ಡ್ ಜೀರುಂಡೆಗಳಂಥ ಕೀಟಗಳು ಮತ್ತೆ ಬಂದಿವೆ.

**ಮಧ್ಯಪ್ರದೇಶದ ರೈತರು ಪಾರಿಸರಿಕವಾಗಿ ಸಮರ್ಥವಾದ ಮತ್ತು ಸುಸ್ಥಿರ ವಿಧಾನಗಳನ್ನು ಬಳಸಿಕೊಂಡು ಸಾಮಾಜಿಕ ಉದ್ಯಮಶೀಲತೆಯನ್ನು ರೂಪಿಸಿ ತಮ್ಮ ಬೆಳೆಯ ಪ್ರಮಾಣವನ್ನು ಮತ್ತು ವರಮಾನವನ್ನು ಹೆಚ್ಚಿಸಿಕೊಂಡಿದ್ದಾರೆ. ಸಾಮಾಜಿಕ ಉದ್ಯಮಶೀಲತೆಯ ಮಾದರಿಯು ರೈತರಿಗೆ ಕಡಿಮೆ ಹೂಡಿಕೆಯಲ್ಲಿ ಉತ್ತಮ ವರಮಾನವನ್ನು ಗಳಿಸಲು ಮಾತ್ರವಷ್ಟೇ ನೆರವಾಗಿಲ್ಲ; ಜೊತೆಗೆ ಜೀವವೈವಿಧ್ಯವನ್ನು ನಿರ್ಮಿಸುವಲ್ಲೂ ಸಹಕಾರಿಯಾಗಿದೆ.**

■ **ಪ್ರಮೇಲ್ ಗುಪ್ತಾ**

ಖಾನ್‌ಪುರವು ಭಾರತದ ಮಧ್ಯಪ್ರದೇಶ ರಾಜ್ಯದ ಸೆಹೋರ್ ಜಿಲ್ಲೆಯ ಬುಧ್ನಿ ಬ್ಲಾಕ್‌ನಲ್ಲಿ 100 ಮನೆಗಳಿರುವ ಒಂದು ಚಿಕ್ಕ ಹಳ್ಳಿ. ಈ ಹಳ್ಳಿಯು ದಟ್ಟವಾದ ಅರಣ್ಯದ ಮಧ್ಯೆ ಇದೆ. ಇಲ್ಲಿ ಕೃಷಿಯೇ ಪ್ರಮುಖವಾದ ವರಮಾನವಾಗಿದೆ. ಕೆಲವು ವರ್ಷಗಳ ಹಿಂದಿನವರೆಗೂ ಈ ಪ್ರದೇಶದ ರೈತರು ಸಾಂಪ್ರದಾಯಿಕ ಕೃಷಿ ವಿಧಾನಗಳನ್ನು ಕೈಬಿಟ್ಟವರಾಗಿ, ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ವಿಪರೀತವಾಗಿ ಅವಲಂಬಿಸಿದ್ದರು.

ಈ ಪ್ರದೇಶದಲ್ಲಿ ವೃತ್ತಿ ಜೀವನನಿರ್ವಹಣಾ ಸಂಪನ್ಮೂಲ ಕೇಂದ್ರ ಎಂಬ ಸ್ವಯಂಸೇವಾ ಸಂಸ್ಥೆಯು ಸುಸ್ಥಿರ ಜೀವ ನಿರ್ವಹಣೆಯನ್ನು ಉತ್ತೇಜಿಸುತ್ತಿದೆ. ಸಣ್ಣ ಕೃಷಿಕರು ಬೇಕಾಬಿಟ್ಟಿಯಾಗಿ ಕೀಟನಾಶಕಗಳನ್ನು ಬಳಸುತ್ತಿದ್ದು ಎಕರೆಗೆ 1000 ರೂ.ನಿಂದ 3000 ರೂ.ವರೆಗೆ ಖರ್ಚು ಮಾಡುತ್ತಿರುವುದನ್ನು ಇಲ್ಲಿ ಕಂಡುಕೊಳ್ಳಲಾಯಿತು. ಈ ರೀತಿಯಾಗಿ ಮಿತಿಯಿಲ್ಲದ ರಾಸಾಯನಿಕಗಳು ಮತ್ತು ಕೀಟನಾಶಕಗಳ ಬಳಕೆಯಿಂದ ಕೃಷಿಯ ವೆಚ್ಚವು ಹೆಚ್ಚಾಗಿದ್ದಷ್ಟೇ ಅಲ್ಲ, ಕೀಟಗಳು ವಿಷನಿರೋಧಕ ಶಕ್ತಿಯನ್ನು ಬೆಳೆಸಿಕೊಳ್ಳುವುದು, ಕೀಟಗಳು ಪದೇ ಪದೇ ಹಾವಳಿ ಮಾಡುವುದು, ಪಾರಿಸರಿಕ ಮತ್ತು ಆಹಾರ ಸುರಕ್ಷತೆಯ ಅಪಾಯಗಳು – ಇಂಥ ಹಲವು ಸಮಸ್ಯೆಗಳಿಗೂ ಇದು ಕಾರಣವಾಗಿತ್ತು.

ರೈತರು ಪಾರಿಸರಿಕವಾದ ಸುಸ್ಥಿರ ವಿಧಾನಗಳನ್ನು ಅನುಸರಿಸುತ್ತ ಕೃಷಿವೆಚ್ಚವನ್ನು ತಗ್ಗಿಸಲು ಸಹಾಯಕವಾಗುವಂತೆ ವೃತ್ತಿಯು (livelihood resource centre an NGO) ಸ್ಥಳೀಯ ಜ್ಞಾನದ ಆಧಾರದಲ್ಲಿ ಗೋಮೂತ್ರ, ಬೇವು ಮತ್ತು ಔಡಲ ಎಲೆ ಆಧಾರಿತ ಜೈವಿಕ ಕೀಟನಾಶಕಗಳನ್ನು ಬಳಸುವಂತೆ ಪ್ರಚಾರ ಮಾಡಲಾರಂಭಿಸಿತು. ಆದರೆ ಇದನ್ನು ಆರಂಭದಲ್ಲಿ ಬಹುಕಾಲದಿಂದ ರಾಸಾಯಿಕಗಳನ್ನು ಬಳಸುತ್ತಲೇ ಬಂದ ರೈತರು 'ಇಂಥ ಜೈವಿಕ ಕೀಟನಾಶಕಗಳು ಸಮರ್ಥವಾಗಿರುತ್ತವೆಯೇ?' ಎಂಬ ಅನುಮಾನದಿಂದಲೇ ನೋಡಿದರು. ಆದರೆ ವ್ಯವಸ್ಥಿತವಾದ ವಿಧಾನಗಳ ಮೂಲಕ ವೃತ್ತಿಯು ಈ ರೈತರಿಗೆ ಜೈವಿಕ ಕೀಟನಾಶಕಗಳನ್ನು ಬಳಸುವುದರಿಂದ ಸಿಗುವ ಲಾಭಗಳ ಬಗ್ಗೆ ಶಿಕ್ಷಣ ನೀಡಿತು. ಇದಲ್ಲದೆ ವೃತ್ತಿಯು ಇದರ ಸುತ್ತಮುತ್ತಲೇ ಒಂದು ಕಾರ್ಯಸಾಧ್ಯವಾದ ವ್ಯವಹಾರ ಮಾದರಿಯಲ್ಲಿ ರೂಪಿಸಲೂ ಉತ್ತೇಜನ ನೀಡಿತು.



**ತನ್ನ ಜೈವಿಕ ಕೀಟನಾಶಕ ಉತ್ಪಾದನೆಯೊಂದಿಗೆ ಶ್ರೀ ರಾಮ್ ಕೈಲಾಶ್**

ವೃತ್ತಿಯು ಗ್ರಾಮದ ಸಮುದಾಯಗಳು ರೈತ ಕ್ಲಬ್ ಮತ್ತು ಸ್ವಸಹಾಯ ಗುಂಪುಗಳನ್ನು (ಎಸ್‌ಎಚ್‌ಜಿ) ಸಂಘಟಿಸಲು ಸಹಕಾರ ನೀಡಿತು. ರೈತ ಕ್ಲಬ್‌ನ ಸದಸ್ಯರನ್ನು ವಿವಿಧ ಕೃಷಿ ಪ್ರದೇಶಗಳಿಗೆ ಕರೆದುಕೊಂಡು ಹೋಗಿ ಎಸ್‌ಆರ್‌ಐ, ಎಸ್‌ಡಬ್ಲ್ಯುಐ, ಎನ್‌ಪಿಎಂ ಮತ್ತು ಸಾವಯವ ಕೃಷಿ ಮುಂತಾದ ಉತ್ತಮ ಕೃಷಿ ಆಚರಣೆಗಳನ್ನು ನೋಡಿ ಕಲಿಯುವುದಕ್ಕೆ ಸಹಾಯ ನೀಡಿತು. ಕ್ಲಬ್‌ನ ಸದಸ್ಯರು ಕೃಷಿ ವಿಜ್ಞಾನ ಕೇಂದ್ರ, ಕೃಷಿ ವಿಶ್ವವಿದ್ಯಾಲಯಗಳು ಮತ್ತು ಇತರೆ ಸಂಸ್ಥೆಗಳಿಗೂ ಭೇಟಿ ನೀಡಿ, ಸಿಬ್ಬಂದಿಯೊಡನೆ ಮಾತುಕತೆ ನಡೆಸಿ ಕೃಷಿ ಉತ್ಪನ್ನ ಸಂಘಟನೆಗಳ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿದುಕೊಂಡರು.

ಇಲ್ಲಿ ಉತ್ತಮ ಕೃಷಿ ವಿಧಾನಗಳನ್ನು ಅಳವಡಿಸಿಕೊಂಡ ಮತ್ತು ಅನ್ವೇಷಣಾ ಮನೋಭಾವದ, ಧನಾತ್ಮಕ ವರ್ತನೆ ಮತ್ತು ಸಮುದಾಯದ ಸಮ್ಮತಿ ಇರುವ ಕೆಲವು ಮುಂಚೂಣಿ ರೈತರನ್ನು ಕೃಷಿ ವ್ಯವಹಾರ ಅಭಿವೃದ್ಧಿ ಸೇವೆ (ಬಿಡಿಎಸ್) ನೀಡಿಕೆದಾರರೆಂದು ಆಯ್ಕೆ ಮಾಡಲಾಯಿತು. ಈ ಬಿಡಿಎಸ್ ನೀಡಿಕೆದಾರರ ಪಾತ್ರ ಎಂದರೆ ರೈತರಿಗೆ ಅವರ ಮನೆ ಬಾಗಿಲಿನಲ್ಲೇ ಬೆಂಬಲ ನೀಡುವುದು ಮತ್ತು ಸರ್ಕಾರಿ ಸೇವೆಗಳಿಗೆ, ಮಾರುಕಟ್ಟೆ ವ್ಯಕ್ತಿಗಳಿಗೆ, ವಿಸ್ತರಣಾ ಸೇವೆಗಳಿಗೆ ಹಾಗೂ ಸಂಶೋಧನೆ ಮತ್ತು ವಿಜ್ಞಾನ ಸಂಸ್ಥೆಗಳಿಗೆ ಕೊಂಡಿಯಾಗಿ ವರ್ತಿಸುವುದು.

ಈ ಕೃಷಿ ಬಿಡಿಎಸ್ ನೀಡಿಕೆದಾರರಿಗೆ ಮಾಸ್ಟರ್ ತರಬೇತುದಾರರು ಎಂದು ತರಬೇತಿ ನೀಡಲಾಯಿತು. ಅವರಿಗೆ ನೋಂದಾಯಿತ ರೈತರು ಗೋಮೂತ್ರ ಸಂಗ್ರಹಿಸಲು ಮತ್ತು ಅದನ್ನು ಜೈವಿಕ ಕೀಟನಾಶಕಗಳ ಉತ್ಪಾದನೆಗಾಗಿ ಬಿಡಿಎಸ್‌ಗೆ ಸರಬರಾಜು ಮಾಡುವಂತೆ ಉತ್ತೇಜನ ನೀಡಲಾಯಿತು. ಅಲ್ಲದೆ ಗೋಮೂತ್ರದ ಬಳಕೆ ಮತ್ತು ಬೇವಿನ ಎಲೆ ಆಧಾರಿತ ಜೈವಿಕ ಕೀಟನಾಶಕಗಳ ಉಪಯುಕ್ತತೆಯನ್ನು ಅಳೆಯಲೂ ತರಬೇತಿ ನೀಡಲಾಯಿತು.

## ಪ್ರಕ್ರಿಯೆ

ಜೀವಿಕ ಕೀಟನಾಶಕದ ಉತ್ಪಾದನೆಯ ಇಡೀ ಪ್ರಕ್ರಿಯೆಯು ಮೂರು ಹಂತಗಳಲ್ಲಿ ನಡೆಯುತ್ತದೆ. ಎಸ್‌ಎಚ್‌ಜಿ/ಕೃಷಿ ಕ್ಲಬ್ ಮಟ್ಟದಲ್ಲಿ ಗೋಮೂತ್ರವನ್ನು ಸಂಗ್ರಹಿಸಲಾಗುತ್ತದೆ. ಗೋಮೂತ್ರದ ಸಂಗ್ರಹದಲ್ಲಿ

**ಶೇಕಡಾ 25ರಷ್ಟು ರೈತರು ಕೀಟನಾಶಕಗಳ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸಿದ್ದಾರೆ; ಶೇಕಡಾ 50ರಷ್ಟು ರೈತರು ಬಳಕೆಯನ್ನು ಅರ್ಧಕ್ಕರ್ಧ ಕಡಿಮೆ ಮಾಡಿದ್ದಾರೆ. ಇದರಿಂದಾಗಿ ಉತ್ಪಾದನಾ ವೆಚ್ಚವು ಗಮನಾರ್ಹ ಪ್ರಮಾಣದಲ್ಲಿ ಕಡಿಮೆಯಾಗಿದೆ.**

## ಮುಂಚೂಣಿ ರೈತರೊಬ್ಬರ ಕಥೆ

ಖಾನ್‌ಪುರ ಹಳ್ಳಿಯ ಕೃಷಿ ಬಿಡಿಎಸ್‌ಗೆ ಸೇರಿದ ಶ್ರೀ ರಾಮ್ ಕೈಲಾಶ್ ಯಾದವ್ – ಈ ವಿಧಾನವನ್ನು ಎಲ್ಲರಿಗಿಂತ ಮೊದಲು ಅನುಸರಿಸಿದ ಮುಂಚೂಣಿ ರೈತರು. ಅವರಿಗೆ 35 ವರ್ಷ ವಯಸ್ಸು. ಅವರು ಶಿಕ್ಷಿತ ರೈತರು; ಸುಮಾರು ಐದೆಕೆರೆ ಹೊಲ ಇದೆ. ಅವರದು ಕುತೂಹಲದ ಮನಸ್ಸು ; ಅವರೊಬ್ಬ ಶ್ರಮಜೀವಿ; ಅವರಲ್ಲಿ ನಾಯಕತ್ವದ ಗುಣವೂ ಇದೆ. ಹಾಗೆಯೇ ಅವರು ಉದ್ಯಮಶೀಲತೆಯನ್ನೂ ಹೊಂದಿದ್ದಾರೆ. ಅವರಲ್ಲಿ ನಾಲ್ಕು ಹಸುಗಳಿವೆ.

ವೃತ್ತಿಯ ಸಹಯೋಗದೊಂದಿಗೆ ರಾಮ್ ಕೈಲಾಶ್‌ರವರು ಗೋಮೂತ್ರದಿಂದ ಜೈವಿಕ ಕೀಟನಾಶಕವನ್ನು ಉತ್ಪಾದಿಸಲು ಆರಂಭಿಸಿದರು. ಉದ್ಯಮವನ್ನು ಆರಂಭಿಸಲು ಅವರು ನಬಾರ್ಡ್‌ನ ನೆರವಿನೊಂದಿಗೆ 200 ಲೀಟರ್ ಸಾಮರ್ಥ್ಯದ 18 ಡ್ರಂಗಳನ್ನು ಖರೀದಿಸಿದರು.

ಅವರು 15 ಲೀಟರ್ ಗೋಮೂತ್ರವನ್ನು ಸಂಗ್ರಹಿಸಿ ಅದಕ್ಕೆ 5 ಕಿಲೋ ಬೇವಿನ ಸೊಪ್ಪು, ಅರ್ಧ ಕಿಲೋ ಸೀತಾಫಲ ಎಲೆಗಳನ್ನು ಮತ್ತು ಅರ್ಧ ಕಿಲೋ ಕಾಲಾಟ್ರೋಪಿಸ್ ಗೈಗಾಂಟಾ ಎಲೆಗಳನ್ನು ಸೇರಿಸಿದರು. 21 ದಿನಗಳ ಕಾಲ ಅದನ್ನು ಮುಚ್ಚಿ ಹಾಗೆಯೇ ಇಟ್ಟರು. ಈ ಮಿಶ್ರಣವು ಅನೇರೋಬಿಕ್ (ಆಮ್ಲಜನಕ ರಹಿತ, ಅವಾಯುಜೀವಕ) ಹುದುಗನ್ನು ರೂಪಿಸುತ್ತದೆ. 21 ದಿನಗಳ ನಂತರ ಅರ್ಧ ಕಿಲೋ ಜೈವಿಕ ಕೀಟನಾಶಕವನ್ನು 15 ಲೀಟರ್ ನೀರಿನೊಂದಿಗೆ ಬೆರೆಸಿ ಸೋಯಾಬೀನ್ ಬೆಳೆಯ ಮೇಲೆ ಸಿಂಪಡಿಸಲಾಯಿತು. ಈ ಸಿಂಪಡಣೆಯನ್ನು ಪ್ರತೀ 15 ದಿನಗಳಿಗೆ ಒಮ್ಮೆ ಮಾಡಲಾಯಿತು.

ಬೆಳೆಯಲ್ಲಿ ಗಮನಾರ್ಹ ಬದಲಾವಣೆ ಆಗಿರುವುದನ್ನು ರಾಮ್ ಕೈಲಾಶ್ ಕಂಡುಕೊಂಡರು. ಸಸಿಗಳ ಬೆಳವಣಿಗೆಯೂ ತುಂಬಾ ಚೆನ್ನಾಗಿ ಆಗಿತ್ತು. ಬೇರುಗಳು ಹಿಂದಿಗಿಂತ ಗಟ್ಟಿಮುಟ್ಟಾಗಿದ್ದವು ಮತ್ತು ಹರಡಿಕೊಳ್ಳಲು ಆರಂಭಿಸಿದವು; ಅದೇ ಸಸಿಯ ಆರೋಗ್ಯದ ಲಕ್ಷಣ. ರೋಗಗಳ ದಾಳಿಯೂ ಕುಗ್ಗಿತು. ಸಸ್ಯವು ಇನ್ನೂ ಹೆಚ್ಚು ರೋಗ ಮತ್ತು ಕೀಟನಿರೋಧಕವಾಯಿತು. ಧಾನ್ಯದ ಗುಣಮಟ್ಟವೂ ಹೆಚ್ಚಿತು. ಗೋಮೂತ್ರದ ಸಿಂಪಡಣೆಯಿಂದಾಗಿ ಭೂಮಿಯು ಇನ್ನೂ ಫಲವತ್ತಾಯಿತು. ಫಸಲಿನಲ್ಲಿ ಹೆಚ್ಚಳ ಕಂಡುಬಂತು. ಬೀಜಗಳು ಜೈವಿಕ ಕೀಟನಾಶಕಗಳನ್ನು ಬಳಸದೇ ಬೆಳೆದ ಬೀಜಗಳಿಗಿಂತ ಹೆಚ್ಚು ಆರೋಗ್ಯಪೂರ್ಣವಾಗಿದ್ದವು.

ಈ ಎಲ್ಲಾ ಧನಾತ್ಮಕ ಬದಲಾವಣೆಗಳನ್ನು ಕಂಡ ಅವರು ಜೈವಿಕ ಕೀಟನಾಶಕವನ್ನು ವಾಣಿಜ್ಯ ಪ್ರಮಾಣದಲ್ಲಿ ಉತ್ಪಾದಿಸಲು ಆರಂಭಿಸಿದರು. ಅವರು ಮೊದಲ ವರ್ಷ 2200 ಲೀಟರ್ ಜೈವಿಕ ಕೀಟನಾಶಕವನ್ನು ಉತ್ಪಾದಿಸಿದರು. ಆಗ ಅವರಿಗೆ 17600 ರೂ.ಗಳ ಲಾಭವಾಯಿತು. ರಾಮ್ ಕೈಲಾಶ್ ಯಾದವ್‌ರಿಗೆ ಬಂದ ಲಾಭದ ಲೆಕ್ಕ ಹೀಗಿದೆ:

| ವರ್ಷ | ಪ್ರತೀ ಲೀಟರ್‌ಗೆ ಒಳಸುರಿ ಲೆಕ್ಕ | ಉತ್ಪಾದನೆ (ಲೀ.ಗಳಲ್ಲಿ) | ಮಾರಾಟ ದರ | ಮೊತ್ತ | ಲಾಭ |
|---|---|---|---|---|---|
| 2013 | ರೂ. 4 | 5700 | ರೂ. 12 | ರೂ. 68400 | ರೂ. 45600 |
| 2012 | ರೂ. 4 | 2200 | ರೂ. 12 | ರೂ. 26400 | ರೂ. 17600 |

ಜೈವಿಕ ಕೀಟನಾಶಕವನ್ನು ಉತ್ಪಾದಿಸಲು ಯಾವುದೇ ಕೂಲಿ ಬೇಕಿಲ್ಲ; ತುಂಬಾ ಸುಲಭವಾಗಿ ಅದನ್ನು ತಯಾರಿಸಬಹುದು. ಜೈವಿಕ ಕೀಟನಾಶಕವನ್ನು ಉತ್ಪಾದಿಸಲು ಬೇಕಾದ ಒಳಸುರಿಯು ತುಂಬಾ ಕಡಿಮೆ. ಅವರು ಕಾಡಿನಿಂದಲೇ ಬೇವಿನ ಸೊಪ್ಪು, ಸೀತಾಫಲ ಸೊಪ್ಪು ಮತ್ತು ಕಾಲಾಟ್ರೋಪಿಸ್ ಗೈಗಾಂಟಾ ಸೊಪ್ಪನ್ನು ಸಂಗ್ರಹಿಸುತ್ತಾರೆ. ಅವರು ತಾವೇ ಸಾಕಿದ ಗೋವುಗಳಿಂದ ಗೋಮೂತ್ರವನ್ನು ಸಂಗ್ರಹಿಸುತ್ತಾರೆ. ವಾಸ್ತವವಾಗಿ ರಾಮ್ ಕೈಲಾಶ್ ತನ್ನ ವ್ಯವಹಾರವನ್ನು ಕೇವಲ 200 ರೂ. ಗಳಿಂದ ಆರಂಭಿಸಿದರು.

400ಕ್ಕೂ ಹೆಚ್ಚು ಮನೆಗಳು ಕಾರ್ಯನಿರತವಾಗಿವೆ. ಎಸ್‌ಎಚ್‌ಜಿ/ಕೃಷಿ ಸಮುದಾಯಗಳಿಂದ ನೇರವಾಗಿ ಗೋಮೂತ್ರವನ್ನು ಸಂಗ್ರಹಿಸುವ ಬಿಡಿಎಸ್ ನೀಡಿಕೆದಾರರು ಅದನ್ನು ಉತ್ಪಾದನಾ ಕೇಂದ್ರಕ್ಕೆ ಒಯ್ಯುತ್ತಾರೆ. ಮನೆಗಳಿಂದ ಪ್ರತಿನಿತ್ಯವೂ ಸುಮಾರು 500 ಲೀಟರ್‌ಗಳಷ್ಟು ಗೋಮೂತ್ರವನ್ನು ಸಂಗ್ರಹಿಸಲಾಗುತ್ತದೆ. ರೈತರಿಗೆ ಪ್ರತಿಯೊಂದು ಲೀಟರ್ ಗೋಮೂತ್ರಕ್ಕೆ 5 ರೂ. ನೀಡಲಾಗುತ್ತದೆ.

ಸಂಸ್ಕರಣೆಯನ್ನು ಖಾಂದಾವರ್, ಖಾನ್‌ಪುರ ಮತ್ತು ಒಂಡಿಯಾ ಹಳ್ಳಿಗಳಲ್ಲಿ ಇರುವ ಮೂರು ಘಟಕಗಳಲ್ಲಿ ಮಾಡಲಾಗುತ್ತದೆ. ಸಂಗ್ರಹಿತ ಗೋಮೂತ್ರವನ್ನು 200 ಲೀಟರ್ ಸಾಮರ್ಥ್ಯದ ಡ್ರಂಗಳಲ್ಲಿ ತುಂಬಲಾಗುತ್ತದೆ. ಇದಕ್ಕೆ 20 ಕಿಲೋ ಬೇವು ಮತ್ತು ಸೀತಾಫಲದ ಎಲೆಗಳನ್ನು ಸೇರಿಸುತ್ತಾರೆ. ಈ ಡ್ರಂನ್ನು 21 ದಿನಗಳ ಕಾಲ ಮುಚ್ಚಿಟ್ಟು ಹುದುಗು ಬರುವಂತೆ ನೋಡಿಕೊಳ್ಳಲಾಗುತ್ತದೆ. ಎಲೆಗಳನ್ನು ಸೋಸಿ ತೆಗೆದ ಮೇಲೆ ಈ ದ್ರಾವಣವನ್ನು ಜೈವಿಕ ಕೀಟನಾಶಕದಂತೆ ಬಳಸಲಾಗುತ್ತದೆ. ಪ್ರತಿಯೊಂದೂ ಘಟಕಕ್ಕೆ 3000 ಲೀಟರ್‌ಗಳಷ್ಟು ಜೈವಿಕ ಕೀಟನಾಶಕವನ್ನು ಉತ್ಪಾದಿಸುವ ಸಾಮರ್ಥ್ಯ ಇದೆ. ಈಗ ಕೆಲವು ಎಸ್‌ಎಚ್‌ಜಿಗಳು ತಮ್ಮ ಹಳ್ಳಿಗಳ ಮಟ್ಟದಲ್ಲೇ ಜೈವಿಕ ಕೀಟನಾಶಕವನ್ನು ಉತ್ಪಾದಿಸುವ ಮತ್ತು ತಮ್ಮ ಹಳ್ಳಿಯ ಒಳಗೇ ಮಾರುವ ಉತ್ಸಾಹ ತೋರಿಸಿವೆ.

ಈ ಜೈವಿಕ ಕೀಟನಾಶಕದ ದ್ರಾವಣದ ಮಾರುಕಟ್ಟೆ ಹೊಣೆಗಾರಿಕೆಯನ್ನು ನರ್ಮದಾಂಚಲ ರೈತ ಉತ್ಪನ್ನ ಕಂಪನಿ (1000 ರೈತರಿಂದ ಸ್ಥಾಪಿತವಾಗಿದೆ) ಮೂಲಕ ಮಾಡಲಾಗುತ್ತಿದೆ. ಇದು ಜೈವಿಕ ಕೀಟನಾಶಕಗಳನ್ನು ಖರೀದಿಸುತ್ತದೆ. ನರ್ಮದಾಂಚಲವು ಒಂದು ಸಮುದಾಯ ಸಂಘಟನೆಯಾಗಿದ್ದು ಉತ್ಪಾದಕ ಸಂಸ್ಥೆ ಎಂದು ಕಂಪನಿಗಳ ಕಾಯ್ದೆಯಲ್ಲಿ ನೋಂದಾಯಿತವಾಗಿದೆ. ಈ ಜೈವಿಕ ಕೀಟನಾಶಕವನ್ನು ಎಜೆಕ್ಟಾ ಎಂಬ ಬ್ರಾಂಡ್ ಹೆಸರಿನಲ್ಲಿ ಮಾರಲಾಗುತ್ತಿದೆ.

### ಲಾಭಗಳು

ಜೈವಿಕ ಕೀಟನಾಶಕಗಳನ್ನು ಸುಮಾರು 500 ರೈತರು ವಿವಿಧ ಬೆಳೆಗಳಾದ ಭತ್ತ, ಗೋಧಿ, ಸೋಯಾಬೀನ್ ಬೆಳೆಗಳ ಹೊಲಗಳಲ್ಲಿ ಬಳಸುತ್ತಿದ್ದಾರೆ. ಜೈವಿಕ ಕೀಟನಾಶಕಗಳ ಬಳಕೆಯಿಂದ ಹಲವಾರು ಲಾಭಗಳಿವೆ ಎಂಬುದು ಅವರ ಅನುಭವ. ಶೇ. 20–25ರಷ್ಟು ಫಸಲಿನ ಹೆಚ್ಚಳವಾಗಿದೆ; ಎಲೆಗಳು ಹಳದಿ ಬಣ್ಣಕ್ಕೆ ತಿರುಗುವುದಿಲ್ಲ; ಯಾವುದೇ ಫಂಗಸ್ ರೋಗ ಬರುವುದಿಲ್ಲ; ಸಸಿಗಳು ಆರೋಗ್ಯಪೂರ್ಣವಾಗಿವೆ; ಧಾನ್ಯಗಳ ತೂಕವೂ ಹೆಚ್ಚಾಗಿದೆ. ಅಲ್ಲದೆ ಬೀಜಗಳು ಒಳ್ಳೆಯ ಬಣ್ಣವನ್ನು ಹೊಂದಿವೆ.



ಶ್ರೀ ದೀಪಕ್ ಕುಮಾರ್, ಜನರಲ್ ಮ್ಯಾನೇಜರ್ ಅವರಿಂದ ಜೈವಿಕ ಕೀಟನಾಶಕ ಘಟಕದ ಉದ್ಘಾಟನೆ

ರೈತರು ರಾಸಾಯನಿಕ ಕೀಟನಾಶಕಗಳನ್ನು ಬಳಸುವುದನ್ನೇ ಕಡಿಮೆ ಮಾಡಿದ್ದಾರೆ. ಶೇಕಡಾ 25ರಷ್ಟು ರೈತರು ಕೀಟನಾಶಕಗಳ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸಿದ್ದಾರೆ; ಶೇಕಡಾ 50ರಷ್ಟು ರೈತರು ಬಳಕೆಯನ್ನು ಅರ್ಧಕ್ಕರ್ಧ ಕಡಿಮೆ ಮಾಡಿದ್ದಾರೆ. ಉಳಿದವರು ಒಂದು ಬೆಳೆಯ ಕಾಲಾವಧಿಯಲ್ಲಿ ಕೊನೇ ಪಕ್ಷ ಒಮ್ಮೆಯಾದರೂ ಜೈವಿಕ ಕೀಟನಾಶಕವನ್ನು ಬಳಸಿದ್ದಾರೆ. ಇದರಿಂದಾಗಿ ಬೆಳೆ ಬೆಳೆಯುವ ವೆಚ್ಚವು ಸಾಕಷ್ಟು ಕಡಿಮೆಯಾಗಿದೆ. ರಾಸಾಯನಿಕ ಕೀಟನಾಶಕಗಳನ್ನು ಬಳಸಿದಾಗ ಎಕರೆಗೆ 1800 ರೂ. ಬೇಕಾಗುತ್ತಿತ್ತು; ಆದರೆ ಜೈವಿಕ ಕೀಟನಾಶಕಗಳ ಬೆಲೆಯು 1000 ರೂ. ಹೀಗೆ ಎಕರೆಗೆ 800 ರೂ. ಉಳಿಯುತ್ತದೆ. ಒಟ್ಟಾರೆಯಾಗಿ ಉತ್ಪಾದನಾ ವೆಚ್ಚವು ಕಡಿಮೆಯಾಗಿ ಫಸಲಿನ ಪ್ರಮಾಣವು ಹೆಚ್ಚಾಗಿದೆ. ರೈತರು ಎಕರೆಗೆ ಸರಾಸರಿ 5000 ರೂ.ಗಳಷ್ಟು ಹೆಚ್ಚಿನ ವರಮಾನವನ್ನು ಕಾಣುವಂತಾಗಿದೆ.

ಜೈವಿಕ ಕೀಟನಾಶಕಗಳ ನಿರಂತರ ಬಳಕೆಯಿಂದ ಎರೆಹುಳುಗಳು ಮತ್ತು ಕಪ್ಪುಮಚ್ಚೆಯ ಕೆಂಪು ಜೀರುಂಡೆಗಳ ಪ್ರಮಾಣ ಹೆಚ್ಚಾಗಿದೆ. ಹೀಗೆ ಪಾರಿಸರಿಕ ವೈವಿಧ್ಯವು ಹೆಚ್ಚಿದೆ. ಅಂದರೆ ಇಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರು ಉಳಿತಾಯ ಆದಂತಾಯಿತು. ಏಕೆಂಧರೆ ರಾಸಾಯನಿಕ ಕೀಟನಾಶಕಗಳನ್ನು ಬಳಸುವಾಗ ಯಥೇಚ್ಛ ನೀರು ಬಳಕೆಯಾಗುತ್ತಿತ್ತು.

### ಉಪಕ್ರಮದ ವಿಸ್ತರಣೆ

ಈಗ ಸುಮಾರು 500 ರೈತರು ಭತ್ತ, ಗೋಧಿ, ಸೋಯಾಬೀನ್ ಮುಂತಾದ ಬೆಳೆಗಳಲ್ಲಿ ಗೋಮೂತ್ರ ಆಧಾರಿತ ಜೈವಿಕ ಕೀಟನಾಶಕವನ್ನು ಬಳಸುತ್ತಿದ್ದಾರೆ. ಅವರಿಗೆ ಕಂಡುಬಂದ ಧನಾತ್ಮಕ ಫಲಿತಾಂಶದಿಂದಾಗಿ ವೃತ್ತಿಯು ಉದ್ಯಮಶೀಲತೆಯನ್ನು ನಬಾರ್ಡ್‌ನ ಬೆಂಬಲದೊಂದಿಗೆ ಹೆಚ್ಚಿಸಲು ಪ್ರೋತ್ಸಾಹ ಸಿಕ್ಕಿದಂತಾಗಿದೆ.

ನಬಾರ್ಡ್ ತನ್ನ ಪರಿಸರ ಉತ್ತೇಜನ ನೆರವು ಕಾರ್ಯಕ್ರಮದ ಅಡಿಯಲ್ಲಿ ವೃತ್ತಿಗೆ ಯಾರ್ದನಗರ ಮತ್ತು ಕಂದಾವರ್ ಎಂಬ ಗುಡ್ಡಾಗಾಡು ಪ್ರದೇಶಗಳಲ್ಲಿ ಎರಡು ಜೈವಿಕ ಕೀಟನಾಶಕ ಘಟಕಗಳನ್ನು ಸ್ಥಾಪಿಸಲು ಬೆಂಬಲ ನೀಡಿದೆ. ಇವೆರಡೂ ಮಧ್ಯಪ್ರದೇಶದ ಸೆಹೋರ್ ಜಿಲ್ಲೆಯ ಬುಧ್ನಾ ಬ್ಲಾಕ್‌ನಲ್ಲಿವೆ. ಇವುಗಳನ್ನು ರೈತ ಗುಂಪುಗಳು / ಒಕ್ಕೂಟಗಳು ಮತ್ತು ವೃತ್ತಿ – ಇವೆರಡೂ ಜಂಟಿಯಾಗಿ ನಡೆಸುತ್ತಿವೆ.

ಸಾಮಾಜಿಕ ಉದ್ಯಮಶೀಲತಾ ಮಾದರಿಯು ರೈತರಿಗೆ ಅವರ ಆದಾಯವು ಹೆಚ್ಚುವಂತೆ ಸಹಾಯ ಮಾಡಿದೆಯಷ್ಟೇ ಅಲ್ಲ, ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಿದೆ; ಪರಿಸರವನ್ನು ಸಂರಕ್ಷಿಸಿದೆ.

◆

■ **Pramel Gupta**
Vrutti Livelihood Resource Centre,
Behind Govt. High School, 41, 1st Main Rd, Ashwath Nagar,
RMV 2nd Stage, Bangalore, Karnataka 560094, India.
E-mail: pramel@vrutti.org; info@vrutti.org

**ಆಂಗ್ಲ ಮೂಲ**
ಲೀಸಾ ಇಂಡಿಯಾ, ಸಂಪುಟ 16, ಸಂಚಿಕೆ 1, ಮಾರ್ಚ್ 2014

# ಅರಣ್ಯ ಆಹಾರೋತ್ಪನ್ನ: ಶ್ರೀಮಂತ ವೈವಿಧ್ಯ

■ **ಭರತ್ ಮನ್ಸತ**

**ನಮ್ಮ ಗ್ರಹ ಪ್ರಮುಖ ಬದಲಾವಣೆ ಘಟ್ಟದಲ್ಲಿದೆ. ಮರುಬಳಕೆಯಾಗದ ಪಳೆಯುಳಿಕೆ ಸಂಪನ್ಮೂಲಗಳನ್ನು ಅವಿಶ್ರಾಂತವಾಗಿ ಶೋಷಣೆ ಮಾಡಿದ ನಂತರ, ಬೇಗನೆ ಉಳಿದಿರುವ ಜೈವಿಕ ಸಂಪತ್ತಿನ ಮತ್ತು ಸಂಸ್ಕೃತಿಯನ್ನು ಪುನರುತ್ಪತ್ತಿ ಮಾಡಲೇಬೇಕಿದೆ.**



ಬುಡಕಟ್ಟು ಹಬ್ಬವೊಂದರಲ್ಲಿ ಪ್ರದರ್ಶನದಲ್ಲಿರುವ ಅರಣ್ಯ ಆಹಾರವನ್ನು ವೀಕ್ಷಿಸುತ್ತಿರುವ ಪ್ರತಿನಿಧಿ.

ಹೆಚ್ಚುಕಡಿಮೆ ಎರಡು ದಶಕಗಳ ಹಿಂದೆ, ನಮ್ಮಲ್ಲಿನ ಎರಡು ಡಜನ್ ಜನ, ಪಶ್ಚಿಮ ಘಟ್ಟಗಳ ಉತ್ತರ ಕೊಂಕಣ ಪ್ರದೇಶದ ಸಹ್ಯಾದ್ರಿಯ ತಪ್ಪಲಲ್ಲಿನ, ಈಗ ವಾನ್ವಾಡಿ ಎಂದು ಕರೆಯಲಾಗುವ ಕಡೆ ಉಬ್ಬು ತಗ್ಗುಗಳಿಂದ ಕೂಡಿದ ಜಾಗ ಖರೀದಿಸಲು ಸಂಪನ್ಮೂಲಗಳನ್ನೆಲ್ಲ ಕ್ರೋಢೀಕರಿಸಿಕೊಂಡೆವು; ನಮ್ಮ ಮುಖ್ಯ ಗುರಿ– ಪರ್ಯಾವರಣದ ಪುನರುತ್ಪತ್ತಿ ಮತ್ತು ಸ್ಥಳೀಯ ಸ್ವಾವಲಂಬನೆ. ವರ್ಷ ಕಳೆದಂತೆ, ಆ ಪ್ರದೇಶ ಅದ್ಭುತವಾದ ಕಾಡಾಗಿ ಮರುಹುಟ್ಟು ಪಡೆದುಕೊಂಡಿತು: ಎತ್ತರವಾದ, ಒತ್ತಾದ ಮತ್ತು ಶ್ರೀಮಂತ ಜೈವಿಕ ವೈವಿಧ್ಯ. ಸ್ಥಳೀಯ ಬುಡಕಟ್ಟು ಜನರ ಜ್ಞಾನದ ಆಧಾರದ ಮೇಲೆ, ಸಸ್ಯ ಸಂಪತ್ತಿನ ಕುರಿತು ನಡೆಸಿದ ಮಾದರಿ ಸಮೀಕ್ಷೆಯು ಅಚ್ಚರಿಗೆ ತಳ್ಳಿತು. 52 ವಿವಿಧ ಜಾತಿಯ ಗಿಡಮರಗಳು ಕಾಡಿನ ಆಹಾರೋತ್ಪನ್ನಕ್ಕೆ ಕೊಡುಗೆ ನೀಡುತ್ತವೆ (ಎಲೆ, ಹಣ್ಣು, ಹೂವು, ಕಾಂಡ, ಬೇರು). ಸಾಮಾನ್ಯವಾಗಿ ವರ್ಷದ ಕೆಲವು ಋತುಗಳಲ್ಲಿ,

> **1500 ಕ್ಕಿಂತ ಹೆಚ್ಚು ಆಹಾರ ವೈವಿಧ್ಯಗಳು– ಕೃಷಿ ಮಾಡಿ ಬೆಳೆಸಿದ್ದು, ತಮ್ಮಪಾಡಿಗೆ ಬೆಳೆದವು, ಹಸಿ ಮತ್ತು ತಯಾರಿಸಿದ್ದು– ಅಲ್ಲಿ ಪ್ರದರ್ಶನಕ್ಕಿದ್ದವು. ಆ ಪೈಕಿ 900ಕ್ಕಿಂತಲೂ ಹೆಚ್ಚು ಕೃಷಿ ಮಾಡಿಲ್ಲದ ಅರಣ್ಯ ಆಹಾರಗಳು!**

ನಮ್ಮ ಪ್ರದೇಶದಲ್ಲಿ ಹೆಚ್ಚು ದೊರೆಯುವುದು ಮುಂಗಾರಿನ ಪ್ರಾರಂಭದಲ್ಲಿ, ಹಿಂದಿನ ವರ್ಷದ ಕೃಷಿ ಉತ್ಪನ್ನವನ್ನ ಹೆಚ್ಚಾಗಿ ಬಳಸಿರುವಾಗ; ಹೊಸ ಸಸಿ ನೆಡುವಿಕೆ ಕಾಲಕ್ಕೆ ಕೃಷಿಕರಿಗೆ ಹೆಚ್ಚಿನ ಪಾಲನೆಯ ಅವಶ್ಯಕತೆ ಇದ್ದಾಗ.

ವಾನ್ವಾಡಿಯಲ್ಲಿ, ವಿವಿಧ ಸಾಂಪ್ರದಾಯಿಕ ಬಳಕೆಗಳಲ್ಲಿ ಅಗತ್ಯವಾದ 120 ಸಸ್ಯ ಪ್ರಭೇದಗಳನ್ನು ಪ್ರಾಥಮಿಕ ಪಟ್ಟಿಯಲ್ಲಿ ಗುರುತು ಮಾಡಲಾಯಿತು. ಆಹಾರ ಉತ್ಪತ್ತಿ ಮಾಡುವ ಪ್ರಭೇದಗಳಲ್ಲದೆ, 45ಕ್ಕೂ ಹೆಚ್ಚು ಔಷಧೀಯ ಸಸ್ಯಗಳನ್ನು ನಾವು ಪತ್ತೆ ಹಚ್ಚಿದೆವು; ಮತ್ತು ಮೊದಲ ದರ್ಜೆ ಮರದ ತೊಲೆಯ 4 ಪ್ರಭೇದಗಳೂ ಸೇರಿದಂತೆ ಮರದ ತೊಲೆಗಳಾಗಬಲ್ಲ 20 ಸಸ್ಯಪ್ರಭೇದಗಳನ್ನು ಗುರುತಿಸಲಾಯಿತು. ಕೆಲವೊಂದು ಗಿಡಗಳು ನೈಸರ್ಗಿಕ ಬಣ್ಣ, ಸೋಪು, ಖಾದ್ಯ ತೈಲ, ಜೈವಿಕ ಇಂಧನ, ಅಂಟು ಮತ್ತು ಗುಗ್ಗುಳ, ಸಸ್ಯ ಕ್ರಿಮಿನಾಶಕ, ಎಲೆ ತಟ್ಟೆ ಇತ್ಯಾದಿ ಉತ್ಪನ್ನಗಳನ್ನು ನೀಡುತ್ತವೆ; ಜೊತೆಗೆ ಮೇವು, ಉರುವಲು, ಗೊಬ್ಬರ, ಸಂರಕ್ಷಣಾ ಪೊದೆ, ಕರಕುಶಲ ವಸ್ತುಗಳು ಇತ್ಯಾದಿ.

ಅನೇಕ ಪ್ರಭೇದಗಳು ಬಹೂಪಯೋಗಿ. ಉದಾ: ಹಿಪ್ಪೆ (ಮಹುವಾ) ಮರದ ಎಲೆಗಳು ಮೇವಾಗುತ್ತದೆ. ಹೂಗಳನ್ನು ಬೆಲ್ಲ, ಗಂಜಿ ಅಥವಾ ಸಾರಾಯಿ ಮಾಡಲು ಬಳಸಲಾಗುತ್ತದೆ. ಹಣ್ಣುಗಳನ್ನು ಬೇಯಿಸಿ ತರಕಾರಿಯಂತೆ ಉಪಯೋಗಿಸಬಹುದು. ಬೀಜಗಳನ್ನು ಕುಟ್ಟಿ ಮಾರುಕಟ್ಟೆಯಲ್ಲಿ ಸಿಗುವ ಯಾವುದೇ ಬ್ರಾಂಡಿನ ಖಾದ್ಯ



**ಗುಡ್ಡಗಾಡು ಸಮುದಾಯಗಳು ವೈವಿಧ್ಯಮಯ ಅರಣ್ಯ ಉತ್ಪನ್ನಗಳನ್ನು ಪ್ರದರ್ಶಿಸಿದರು.**

ತೈಲಕ್ಕಿಂತ ಮಿಗಿಲಾದ ತೈಲ ತಯಾರಿಸಬಹುದು. ಮಹುವಾ ಮರಗಳು ಜೀವ ಕಳೆದುಕೊಂಡ ನಂತರ ಅದರ ಮರದಿಂದ ಪೀಠೋಪಕರಣ, ಸಂಗೀತ ಉಪಕರಣಗಳು, ಕೃಷಿ ಉಪಕರಣಗಳು ಮತ್ತು ಮನೆ ಹಾಗೂ ಹಡಗು ನಿರ್ಮಾಣಕ್ಕೆ ಬಳಸಲಾಗುತ್ತದೆ.

ನೈಸರ್ಗಿಕ ಅರಣ್ಯಗಳು ಯಥೇಚ್ಚವಾಗಿ ನೀಡುವ ಸಾವಯವ, ಪುಷ್ಠಿದಾಯಕ ಆಹಾರಗಳ ಶ್ರೀಮಂತ ವೈವಿಧ್ಯವನ್ನು ನಮ್ಮ ಜಿಡಿಪಿ ಆಧಾರಿತ ಆರ್ಥಿಕ ನಾಗರಿಕತೆ ನಿರ್ಲಕ್ಷಿಸಿರುವುದು ದುರಂತವೇ ಸರಿ. ನೀರು, ಇಂಧನ, ಫಲವತ್ತತೆಗೆ ಹೊರಗಿನಿಂದ ಬಳಸಬೇಕಾಗಿಲ್ಲ ಎನ್ನುವುದು ಇದರ ವಿಶೇಷತೆ. ನಿಜ, ಸೌರಶಕ್ತಿಯನ್ನು ಸಮರ್ಥವಾಗಿ ಬಳಸಬಲ್ಲ, ಕಾರ್ಬನ್ ಹೀರಿಕೊಳ್ಳಬಲ್ಲ, ಹವಾಮಾನ ಬದಲಾವಣೆಯನ್ನು ತಡೆಯಬಲ್ಲ, ಮಣ್ಣಿನ ಮತ್ತು ಅದರ ಫಲವತ್ತತೆಯ ಸಂರಕ್ಷಣೆ ಮತ್ತು ಪುನರುತ್ಥಾನ ಮಾಡಬಲ್ಲ, ಅಂತರ್ಜಲದ ಮಟ್ಟ ಏರಿಸಬಲ್ಲ ಜೊತೆಗೆ ಅನೇಕ ಉಪಯೋಗಕಾರಿ ಉತ್ಪನ್ನ ನೀಡಬಲ್ಲ ಅತ್ಯಂತ ಪರಿಣಾಮಕಾರಿ ಸಾಧನ ಅರಣ್ಯ.

ಭೂಮಿಯ ಮೇಲೆ ಸುಮಾರು 80,000 ಖಾದ್ಯ ಸಸ್ಯಪ್ರಭೇದಗಳಿವೆ ಎಂದು ಅಂದಾಜು ಮಾಡಲಾಗಿದೆ ಎಂದು ಗಾಯ್ಯ ಅಟ್ಲಾಸ್ ಆಫ್ ಪ್ಲಾನೆಟ್ ಮ್ಯಾನೇಜ್‌ಮೆಂಟ್ ಹೇಳುತ್ತದೆ. ಆಹಾರ ಬೆಳೆಗಳಾಗಿ 150ಕ್ಕಿಂತಲೂ ಕಡಿಮೆ ಪ್ರಭೇದಗಳನ್ನು ಕೃಷಿ ಮಾಡಿರುವ ಚರಿತ್ರೆ ಇದೆ. ಆದರೆ ಕೈಗಾರಿಕೀಕರಣ ವ್ಯಾಪಕವಾಗಿ ಹರಡಿರುವುದರಿಂದ ಕೇವಲ 20 ಸಸ್ಯ ಪ್ರಭೇದಗಳು ಶೇಕಡಾ 90ರಷ್ಟು ಮಾನವ ಆಹಾರವನ್ನು ಒದಗಿಸುತ್ತಿದೆ; ಅಂದರೆ ಪ್ರಕೃತಿ ಕೊಡಮಾಡಿರುವ ಖಾದ್ಯ ಸಸ್ಯ ಪ್ರಭೇದಗಳಲ್ಲಿ ಕೇವಲ ಶೇ.0.01ರಷ್ಟು ಮಾತ್ರ (ಅಂದರೆ ಹತ್ತುಸಾವಿರದಲ್ಲಿ ಒಂದು ಭಾಗ). ಅಂದರೆ ಥಳುಕಿನ ಮತ್ತು ಬಹುಬ್ರಾಂಡ್‌ಗಳ ಕೊಳ್ಳುಬಾಕತನದಿಂದ ನಾವು ಅಭಿವೃದ್ಧಿ ಹೊಂದುತ್ತಿದ್ದೇವೋ ಅಥವಾ ದರಿದ್ರರಾಗುತ್ತಿದ್ದೇವೋ?

ಫೆಬ್ರವರಿ 2014ರಲ್ಲಿ ಒರಿಸ್ಸಾದ ನಿಯಾಮ್‌ಗಿರಿ ತಪ್ಪಲಲ್ಲಿರುವ ಕಟಕ್‌ನ ಬಿಸ್ಸಾಮ್‌ನಲ್ಲಿ ನಡೆದ ವಿಶಿಷ್ಟವಾದ ಬುಡಕಟ್ಟು ಆಹಾರ ಉತ್ಸವದಲ್ಲಿ ಪಾಲ್ಗೊಳ್ಳುವ ಅವಕಾಶ ನನಗೆ ದೊರೆಯಿತು. ಪೂರ್ವ ಮತ್ತು ಮಧ್ಯಭಾರತದ ವಿವಿಧ ರಾಜ್ಯಗಳ ಸುಮಾರು 200 ಬುಡಕಟ್ಟು ಗ್ರಾಮಗಳಿಂದ 600ಕ್ಕೂ ಹೆಚ್ಚು ಆದಿವಾಸಿಗಳು, ಶೇ.80ರಷ್ಟು ಮಹಿಳೆಯರು ಅಲ್ಲಿ ಸೇರಿದ್ದರು– ಅವರ ವೈವಿಧ್ಯಮಯ ಸಾಂಪ್ರದಾಯಿಕ ಅಡುಗೆಯ ಸಂಭ್ರಮಾಚರಣೆಗೆ 1500 ಕ್ಕಿಂತ ಹೆಚ್ಚು ಆಹಾರ ವೈವಿಧ್ಯಗಳು– ಕೃಷಿ ಮಾಡಿ ಬೆಳೆಸಿದ್ದು, ತಮ್ಮಷ್ಟಕ್ಕೆ ಬೆಳೆದವು, ಹಸಿ ಮತ್ತು ತಯಾರಿಸಿದ್ದು– ಅಲ್ಲಿ ಪ್ರದರ್ಶನಕ್ಕಿದ್ದವು. ಆ ಪೈಕಿ 900ಕ್ಕಿಂತಲೂ ಹೆಚ್ಚು ಕೃಷಿ ಮಾಡಿಲ್ಲದ ಅರಣ್ಯ ಆಹಾರಗಳು!

'ನಾವು ಪಹರಿ ಕೊರ್‍ಬಾ ಜನ ಯಾವಾಗಲೂ ತಲೆಮಾರುಗಳಿಂದ ದೀರ್ಘಕಾಲ ಆರೋಗ್ಯಪೂರ್ಣವಾಗಿ, ಯಾವುದೇ ದೊಡ್ಡ ಕಾಯಿಲೆಗಳಿಲ್ಲದೆ ಬದುಕುತ್ತೇವೆ. ಸಣ್ಣಪುಟ್ಟ ರೋಗಗಳಿಗೆ ಕಾಡಿನ ಗಿಡಮೂಲಿಕೆ, ಸಸ್ಯ, ತರಕಾರಿಗಳನ್ನು ಉಪಯೋಗಿಸುತ್ತೇವೆ ಮತ್ತು ನಾವು ಯಾವತ್ತೂ ಆಸ್ಪತ್ರೆ ಔಷಧ ಅಂಗಡಿಗಳಿಗೆ ಹೋಗುವುದಿಲ್ಲ ಮತ್ತು ಯಾವುದೇ ಚುಚ್ಚುಮದ್ದು ಹಾಕಿಸಿಕೊಳ್ಳುವುದಿಲ್ಲ' ಎಂದು ಪಹರಿ ಕೊರ್‍ಬಾ ಆದಿವಾಸಿ ಮಹಿಳೆಯೊಬ್ಬಳು ಹೇಳಿದಳು.

ಅತಿ ಹೆಚ್ಚು ಮಳೆ ಅಥವಾ ಮಳೆ ಕೊರತೆಯಿಂದಾಗುವ ಬರ ಮತ್ತು ಬೆಳೆ ವೈಫಲ್ಯದಂಥ ಕಠಿಣ ಸಂದರ್ಭದಲ್ಲೂ ಕೃಷಿಯೇತರ ಅರಣ್ಯ ಆಹಾರಗಳು ಹೇಗೆ ಪೌಷ್ಟಿಕಾಂಶ ಮೂಲ ಎನ್ನುವುದನ್ನು ಇತರೆ ಬುಡಕಟ್ಟು ಜನ ವಿವರಿಸಿದರು.

ಆದರೆ ಅನೇಕ ಕಡೆ, ಬಾಹ್ಯ ಅಂಶಗಳಿಂದಾಗಿ ಕೃಷಿಯೇತರ ಆಹಾರಗಳ ಲಭ್ಯತೆ ಮತ್ತು ಸೇವನೆ ಕಡಿಮೆಯಾಗಿರುವುದನ್ನು ಸಮುದಾಯಗಳು ಈಗ ವರದಿ ಮಾಡುತ್ತಿವೆ. ಕಾಡಿನ ನಾಶ, ಎತ್ತಂಗಡಿ, ನಗರೀಕರಣ, ದೊಡ್ಡ ಅಣೆಕಟ್ಟುಗಳು, ಗಣಿಗಾರಿಕೆ, ಬೃಹತ್ ಕೈಗಾರಿಕಾ ಘಟಕಗಳು, ಹಣಕಾಸು ಬೆಳೆಗಳು ಹೆಚ್ಚಿರುವುದು– ಇವೆಲ್ಲ ಶತಮಾನಗಳಿಂದ ಬೆಳೆದು ಬಂದಿರುವ ಕೃಷಿಯೇತರ ಆಹಾರಗಳ ಜೈವಿಕ ಮತ್ತು ಸಾಮಾಜಿಕ ಸಾಂಸ್ಕೃತಿಕ ಪರಿಸರದ ಮೇಲೆ ನಿರಂತರ ಹಲ್ಲೆ ನಡೆಸಿವೆ.

ನಮ್ಮ ಅರಣ್ಯ ಪ್ರದೇಶದ ಶ್ರೀಮಂತ ಪ್ರಾಕೃತಿಕ ಸಂಪತ್ತು ಆದಿವಾಸಿ ಸಮುದಾಯಗಳನ್ನು ತಲೆಮಾರುಗಳಿಂದ ಸುಸ್ಥಿರಗೊಳಿಸಿದೆ. ತಿಣುಕಾಡುತ್ತಿರುವ ಈ ಸಹಸ್ರಮಾನದ ತಲೆಮಾರಿಗೆ ಕಾಡಿನ ಜೊತೆ ಸಮ್ಮಿಳಿತವಾಗಿ ಬದುಕುವ ಕಲೆ ಮತ್ತು ವಿಜ್ಞಾನವನ್ನು ಇಂದು ಯಾರಾದರೂ ಹೇಳಿಕೊಡಬಲ್ಲವರಿದ್ದರೆ ಅದು ಬುಡಕಟ್ಟು ಜನ. ಅಥವಾ, ಇನ್ನೂ ಜ್ಞಾನ, ಕೌಶಲ್ಯ ಮತ್ತು ಸ್ಥಳೀಯ ಸಾಂಸ್ಕೃತಿಕ ದೃಷ್ಟಿಕೋನ ಹೊಂದಿರುವ ಬುಡಕಟ್ಟು ಜನರಲ್ಲಿ ಕೆಲವರು ಮಾತ್ರ.

■ **Bharat Mansata**
Earthcare Books,
10 Middleton Street, Kolkata 700 071
E-mail: bharatmansata@yahoo.com

**ಆಂಗ್ಲ ಮೂಲ**
ಲೀಸಾ ಇಂಡಿಯಾ, ಸಂಪುಟ 16, ಸಂಚಿಕೆ 4, ಡಿಸೆಂಬರ್ 2014

**ನನ್ನ ಈ ಕೋರಿಕೆಯನ್ನು ನೀವು ಊಹಿಸಲಾರಿರಿ. ನನ್ನ ಬಗ್ಗೆ ತಿಳಿಯಬಯಸುವವರಿಗೆ ಸರಿಯಾದ ಪುಸ್ತಕಗಳಿಲ್ಲ. ಪ್ರಸಾರ ಮಾಧ್ಯಮಗಳು ನನ್ನನ್ನು ನಿರ್ಲಕ್ಷಿಸಿವೆ. ಮಕ್ಕಳೇ ಆಗಲಿ. ಯಾವ ವಯಸ್ಸಿನವರೇ ಆಗಲಿ, ಸಿನಿಮಾ ನಟನಟಿಯರ ಬಗ್ಗೆ, ಕ್ರಿಕೆಟ್ ಪಟುಗಳ ಬಗ್ಗೆ ತಿಳಿದುಕೊಂಡಿರುವಷ್ಟು ನನ್ನ ಬಗ್ಗೆ ತಿಳಿದುಕೊಂಡಿಲ್ಲ.**

# ಮಣ್ಣು ಮಾತಾಡಿದಾಗ

■ **ಪ್ರೊ. ಎಂ. ಮಹದೇವಪ್ಪ**

ನಾನು ನಿಮಗೆಲ್ಲಾ ಚಿರಪರಿಚಿತ. ಹುಟ್ಟಿದಾಗಿನಿಂದ ಸಾಯುವವರೆಗೂ ಪ್ರತಿದಿನವೂ ಎಲ್ಲರೂ ನನ್ನನ್ನು ನೋಡುತ್ತಲೇ ಇರುತ್ತಾರೆ. ಆದರೂ ನನ್ನನ್ನು ಸರಿಯಾಗಿ ಅರಿತವರು ವಿರಳ. ಹೆಚ್ಚು ಜನ ನನ್ನನ್ನು ನಿರ್ಜೀವಿ ಎಂದು ಭಾವಿಸಿದ್ದಾರೆ. ನನಗೆ ಜೀವವಿಲ್ಲವೆಂದು ತಪ್ಪು ತಿಳಿದಿರುವುದೊಂದೇ ಅಲ್ಲ 'ನಿನಗೇನು ಗೊತ್ತು ಮಣ್ಣು, ಮಣ್ಣಂಗಟ್ಟಿ, ಮಣ್ಣು ಮುಕ್ಕ' ಹೀಗೆಂದು ಯಾರನ್ನಾದರೂ ಹೀಯಾಳಿಸುವಾಗ ನನ್ನ ಹೆಸರನ್ನು ಬಳಸಿಕೊಳ್ಳುವರು. ನನಗೆ ಜೀವವಿಲ್ಲವೆಂದು ಭಾವಿಸಿ, ನನ್ನನ್ನು ತುಳಿಯುವರು, ಅಪ್ಪಳಿಸುವರು, ಅಗೆಯುವರು, ಕೊಚ್ಚುವರು, ಚುಚ್ಚುವರು, ಉಜ್ಜುವರು, ಜಜ್ಜಿ ನುಚ್ಚುನೂರು ಮಾಡುವರು, ಸುಡುವರು, ನೀರಿಗೆ ಹಾಕಿ ಜಾಲಾಡಿಸುವರು, ಇಟ್ಟಿಗೆಮಾಡಿ ಮನೆ ಕಟ್ಟುವಾಗ ನನ್ನನ್ನು ಬಂಧಿಸಿ ಹತ್ತಾರು, ನೂರಾರು ವರ್ಷ ಒಂದೆಡೆ ಕಟ್ಟಿಹಾಕಿ ಬಿಡುವರು, ಏನೆಲ್ಲಾ ಮಾಡಿದರು ಆದರೂ ನನಗೆ ಸಾವಿಲ್ಲ. ನಾನು ಜೀವಂತವಾಗಿಯೇ ಇದ್ದೇನೆ. ಕಟ್ಟಿಹಾಕಿ ದಶಕ-ಶತಕಗಳಾಗಿದ್ದರೂ ಬಿಡುಗಡೆಯಾದ ನಂತರ ಸಾಯಲು ಬಿಡುವುದಿಲ್ಲ! ಇವರಾರು ಸ್ನೇಹಿತರು ಬಂಧುಗಳು ಎಂದು ಆಶ್ಚರ್ಯವೇ? ಅವರನ್ನು ಪರಿಚಯಿಸಲು ನನಗೆ ಒದಗಿ ಬಂದ ಸುಸಂದರ್ಭವಿದು.

ನನ್ನ ಅರಿತ ನಿಕಟ ಸಂಬಂಧಿಗಳೆಂದರೆ ಸೂರ್ಯ, ಚಂದ್ರ, ಗಾಳಿ, ನೀರು, ಸಾವಯವಾಂಶ ಮತ್ತು ಸಕಲ ಜೀವರಾಶಿ. ಕೊನೆಯದರಲ್ಲಿ (ಜೀವರಾಶಿ) ಮನುಷ್ಯನೂ ಸೇರಿದ್ದಾನೆ. ಜೀವರಾಶಿಗಳ ಪೈಕಿ ಮನುಷ್ಯರನ್ನು ಹೊರತು ಪಡಿಸಿದರೆ, ಮಿಕ್ಕವರೆಲ್ಲಾ ನಿಸ್ವಾರ್ಥಿಗಳು. ನನ್ನಿಂದ ಏನನ್ನೂ ಬಯಸದೆ, ಅವರು ನನಗೆ ಬೇಕಾದುದನ್ನೆಲ್ಲಾ ಕೊಡುವರು. ಸಂಕ್ಷಿಪ್ತ ಅಥವಾ ಸೂಕ್ತವಾಗಿ ಹೇಳುವುದಾದರೆ, ಮನುಷ್ಯನು ನನಗೆ ಕೊಡುವ ಹಿಂಸೆಗೆಲ್ಲಾ ಅವರೇ (ಮಾನವೇತರ ಜೀವಿಗಳು) ಔಷಧಿ. ನನ್ನ ಉಳಿವು, ಅಭಿವೃದ್ಧಿ, ನನ್ನ ಸ್ನೇಹಿತರ ಉತ್ಕೃಷ್ಟ ಬೆಳವಣಿಗೆ, ಸಂಖ್ಯಾಭಿವೃದ್ಧಿ ಹೀಗೆ ನನ್ನ ಹಿತಚಿಂತಕರಿಗೆ ಸಹಾಯವಾಗುವ ಸಾವಯವಾಂಶವನ್ನು, ಮನುಷ್ಯ, ತಿಳಿದೋ ತಿಳಿಯದೆಯೋ ಕಬಳಿಸುವ ಹಾದಿ ಹಿಡಿದಾಗ ನಾನೂ ಬಡವಾಗುತ್ತೇನೆ. ಅವನೂ ಬಡವಾಗುತ್ತಾನೆ. ಜಾನುವಾರುಗಳೂ ಬಡವಾಗುತ್ತವೆ. ಜೀವರಾಶಿಗೆ ಸೇರಿದವರೆಲ್ಲಾ ಪರಸ್ಪರ ಅನ್ಯೋನ್ಯವಾಗಿ 'ಕೊಡು-ತರುವುದು', ಪ್ರತಿಯೊಬ್ಬರ ಬೇಡಿಕೆಗಳನ್ನು ಆತ್ಮೀಯತೆಯಿಂದ ಪೂರೈಸುವುದು, ಜೀವಿಗಳು ಪೃಥ್ವಿಯ ಮೇಲೆ ಉದ್ಭವವಾದಾಗಿನಿಂದಲೂ ನಡೆದು ಬಂದಿರುವ ಸಂಪ್ರದಾಯ. ಈ ಸಂಪ್ರದಾಯದಿಂದ ಹೊರ ಬಂದಿರುವ ಏಕೈಕ ಜೀವಿ ಮನುಷ್ಯ. ಮನುಷ್ಯನ ವಿಷಯ ಇಷ್ಟಕ್ಕಿರಲಿ. ಏಕೆಂದರೆ ನನ್ನ ಸ್ನೇಹಿತರನ್ನು ಪರಿಚಯಿಸಲು ನನಗೆ ಆತುರ.



### ಸೂರ್ಯ

ನನ್ನ ಸೃಷ್ಟಿ, ಉಳಿವು, ಬೆಳವಣಿಗೆ ನನ್ನ ಜೀವರಾಶಿಗಳ ಸಮೂಹದ ಸಂತಾನಾಭಿವೃದ್ಧಿ ಬೆಳವಣಿಗೆಗೆ ಬೇಕಾದ ಸಮತೋಲ ಉಷ್ಣಾಂಶ, ಅಲ್ಲದೇ ವಿಶೇಷ ಜೀವಿಗಳಿಗೆ ಬೇಕಾದ ಮಟ್ಟದಲ್ಲಿ ಹೆಚ್ಚು, ಕಡಿಮೆ ಉಷ್ಣಾಂಶ ಹೀಗೆ ನನ್ನ ರಶ್ಮಿ ಮತ್ತು ಬೆಳಕನ್ನು ಒದಗಿಸುವ, ನನಗಿಂತಲೂ ಹೆಚ್ಚು ವಯಸ್ಸಾಗಿರುವ, ಕತ್ತಲಲ್ಲಿರುವ ಜಗತ್ತಿಗೆ ಬೆಳಕನ್ನು ಚೆಲ್ಲುವ, ಪೂಜಿಸಲು ಅತ್ಯಂತ ಯೋಗ್ಯವಾದ ಗ್ರಹ ಸೂರ್ಯ. ಹಗಲಾಗಲಿ, ರಾತ್ರಿಯಾಗಲಿ ಒಂದೇ ಸಮನೆ ಇದ್ದರೆ ಅಪಾಯಕಾರಿ ಎಂಬುದನ್ನು ಅರಿತು ಅರ್ಧ ದಿವಸ ಮರೆಯಾಗುತ್ತಾನೆ; ಮತ್ತೆ ಉದಯವಾಗುತ್ತಾನೆ. ಇದೇನಿದು ಪ್ರತಿನಿತ್ಯ ಮೂಡಿ ಮುಳುಗುವ ಈ ದಿನಚರಿಯಿಂದ ಅವನಿಗೆ ಬೇಸರವಿಲ್ಲವೇ ಎಂದು ಕೇಳುವುದನ್ನು ತಪ್ಪಿಸಲು ಮಾರ್ಗಗಳನ್ನು ಹುಡುಕಿದ್ದಾನೆ. ಮೋಡಗಳ ಸಹಾಯದಿಂದ ಆಗಾಗ ಮರೆಯಾಗುವುದು, ಆಗಾಗ ತನಗೂ ಪೃಥ್ವಿಗೂ ಮಧ್ಯ ಚಂದ್ರನನ್ನು ಬರಮಾಡಿಕೊಂಡು, ಜನರು 'ಗ್ರಹಣ' ಎಂದು ಕರೆಯುವ ರಮ್ಯನೋಟಕ್ಕೆ ಅವಕಾಶಮಾಡಿ ಕೊಡುತ್ತಾನೆ. ಗ್ರಹಣವು ವಿವಿಧ ಭಂಗಿಯಲ್ಲಿ ಜನರ ಕಣ್ಣಿಗೆ ಹಬ್ಬ ಉಂಟಾಗುವಂತೆ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿ ಕಾಣಿಸಿಕೊಂಡು, ಮನಸ್ಸಿಗೆ ಆನಂದ ಉಂಟುಮಾಡಿ ಬೇಸರ ಹೋಗಲಾಡಿಸುತ್ತಾನೆ. ಅಲ್ಲದೆ ಬುದ್ಧಿಜೀವಿಗಳಲ್ಲಿ ಕುತೂಹಲ ಉಂಟುಮಾಡಿ ವೈಜ್ಞಾನಿಕ ಬೆಳವಣಿಗೆಗೆ ಕಾರಣವಾಗುತ್ತಾನೆ. ತನ್ನ ಶಕ್ತಿ ಮತ್ತು ಸಮುದ್ರ ಹಾಗೂ ಎಲ್ಲಡೆ ಇರುವ ನೀರಿನ ಸಹಯೋಗದೊಡನೆ ಮೋಡಗಳನ್ನು ಸೃಷ್ಟಿಸಿ, ಆಗಾಗ ಭೂಮಿಯ ಮೇಲಿರುವ ಜೀವಿಗಳಿಗೆ ನೆರಳು ಸಿಗುವಂತೆ ಮಾಡುವುದಲ್ಲದೆ, ಎಲ್ಲೆಡೆ ಮಳೆ ಬರಿಸಿ, ಭೂಮಿಯನ್ನು ಜಲಭರಿತ ಮಾಡಿಸಿ, ಫಲವತ್ತತೆಯನ್ನು ಹೆಚ್ಚಿಸಿ, ಸಕಲ ಜೀವಿಗಳ ಉಳಿವು ಅಭಿವೃದ್ಧಿಗೆ ನೆರವು ಮಾಡಿಕೊಡುತ್ತಾನೆ. ಅವನ ಇನ್ನೊಂದು ವೈಶಿಷ್ಟ್ಯವೆಂದರೆ, ರಾತ್ರಿಯೆಲ್ಲಾ ಸಂಪೂರ್ಣ ಕತ್ತಲಿದ್ದು, ಅದು ಪ್ರತಿದಿನದ ಪ್ರಕ್ರಿಯೆಯಾಗಿ ಬೇಸರ ತರುವುದು ಬೇಡ ಬಿಸಿಲಿನ ತಾಪವಿಲ್ಲದ ಬೆಳಕನ್ನು ಕೊಡಬಾರದೇಕೆ ಎಂದು ಯೋಚಿಸಿ, ಪ್ರವಾಸಿಗಳಿಗೆ, ಮದು ಮಕ್ಕಳಿಗೆ ಒಂದು ವಿಶೇಷ ವಾತಾವರಣ ನಿರ್ಮಿಸಬೇಕೆಂದು ತನ್ನ ಸ್ನೇಹಿತ ಚಂದ್ರನೊಡನೆ ಒಪ್ಪಂದ ಮಾಡಿಕೊಂಡು ಅವನ ಮೂಲಕ ತನ್ನದೇ ಬೆಳಕಿನ ಮೂಲದ ಬೆಳದಿಂಗಳ ತಂಪನ್ನು ನೀಡುತ್ತಾನೆ. ಬೆಳದಿಂಗಳು ಒಂದೇ ಸಮನಿದ್ದರೆ ಅದರ ಮಹತ್ವ ಕಳೆದುಕೊಳ್ಳುತ್ತದೆ ಎಂದು ಅರಿತು ಬೆಳದಿಂಗಳ ಮಹತ್ವದ ಬಗ್ಗೆ ಅವರಿಗೆ ತಿಳುವಳಿಕೆ ಉಂಟುಮಾಡಲು ಮೋಡಗಳ ಮರೆಯಲ್ಲಿ ಅವಿತುಕೊಳ್ಳಲು ಮೋಡಗಳ ಸಹಾಯ ಪಡೆಯುತ್ತಾನೆ.

### ಚಂದ್ರ ಮತ್ತು ನಕ್ಷತ್ರಗಳು

ನನ್ನ ಮತ್ತೊಬ್ಬ ಸ್ನೇಹಿತ ಚಂದ್ರನ ಬಗ್ಗೆ ಆಗಲೇ ಸ್ವಲ್ಪ ತಿಳಿಸಿದ್ದೇನೆ. ಒಂಟಿಯಾಗಿ ಮಾಡಲಾಗದುದ್ದನ್ನು ಸಹಭಾಗಿತ್ವದಲ್ಲಿ ಮಾಡಬಹುದು ಎಂಬುದನ್ನು ಸೂರ್ಯ ಚಂದ್ರರು ಜೀವಕೋಟಿಗೆ ತಿಳಿಸಿಕೊಟ್ಟಿದ್ದಾರೆ.

ನಮ್ಮ ಸಂಬಂಧವನ್ನು ಮೆಚ್ಚಿದ ನಕ್ಷತ್ರಗಳು 'ನಾವೂ ನಿಮ್ಮೊಡನಿದ್ದೇವೆ' ಎಂದು ಮಿರು ಮಿರು ಮಿನುಗುತ್ತಾ, ಹೊಳೆಯುತ್ತಾ ಜೀವಕೋಟಿಯ ಕಣ್ಣುಗಳಿಗೆ ಮನಸ್ಸಿಗೆ ತಂಪೆರೆಯುತ್ತವೆ. ಒಮ್ಮೊಮ್ಮೆ ಭೂಮಿಗೆ ಬಿದ್ದು ಮನುಷ್ಯನನ್ನು ಅಥವಾ ಅವನ ಆಸ್ತಿಪಾಸ್ತಿಯನ್ನು ಸುಟ್ಟುಬಿಡುವುದೇನೋ ಎನ್ನುವ ಭಯ ಉಂಟುಮಾಡಿ, ಹಾಗೆ ಮಾಡದೆ ಮಾಯವಾಗಿ ಬಿಡುತ್ತವೆ. ತಮ್ಮನ್ನು ನೋಡಲು 'ಟಿಕೆಟ್ ತೆಗೆದುಕೊಳ್ಳಿ' ಎಂದು ಅವು ಕೇಳುವುದಿಲ್ಲ. ನಕ್ಷತ್ರಗಳು ಒಂದೇ ಸಮನೆ ಕಾಣಿಸಿಕೊಂಡರೆ ಮಹತ್ವ ಕಡಿಮೆಯಾಗುತ್ತದೆ ಅಲ್ಲವೇ? ಆದ್ದರಿಂದಲೇ ಆಗಾಗ ಅವು ಮೋಡಕ್ಕೆ ಮೊರೆ ಹೋಗಿ ಕಣ್ಣಿಗೆ ಕಾಣಿಸದಂತೆ ಇರುತ್ತವೆ. ಅಷ್ಟೊಂದು ಸಂಖ್ಯೆಯಲ್ಲಿದ್ದರೂ ಅವು ಜಗಳ ಮಾಡುವುದಿಲ್ಲ ಮತ್ತು ಸ್ಥಳ ಬದಲಾಯಿಸುವುದಿಲ್ಲ– ರಾಜಕಾರಣಿಗಳಂತೆ! 'ಧ್ರುವ' ತಾರೆಯೊಡಗೂಡಿ ಮನುಷ್ಯನಿಗೆ ದಿಕ್ಕು ತೋರಿಸುವ ಅವಿರತ ಮಾರ್ಗದರ್ಶಿಗಳಾಗಿವೆ.

### ಗಾಳಿ

ಗಾಳಿಯೇ ಎಲ್ಲಾ ಜೀವಿಗಳಿಗೂ ಪ್ರಾಣ. ಇಲ್ಲದಿದ್ದರೆ, ಅಲ್ಲಲ್ಲಿ ಉದ್ಭವಿಸಿದ ತ್ಯಾಜ್ಯ, ಕೊಳೆ, ಇತ್ಯಾದಿ ಬೇಡವಾದ ಹಾಗೂ ಬೇಕಾದ ವಸ್ತುಗಳು ಒಂದೆಡೆಯೇ ಇದ್ದು ಮಾರಕವಾಗುತ್ತದೆ. ಗಾಳಿ ಉಷ್ಣಾಂಶವನ್ನು ಒಂದು ಹದಕ್ಕೆ ತರುತ್ತದೆ. ಸಕಲ ಜೀವಿಗಳ ಚಲನೆಗೂ ವಾಹನವಾಗುತ್ತದೆ. ಸಕಲ ಜೀವಿಗಳ ಉಸಿರು ಗಾಳಿ, ಅಂದರೆ ಪ್ರಾಣ. ಗಾಳಿಗೆ ಅತ್ಯಂತ ಮಹತ್ವದ ಕಾರ್ಯ ಮತ್ತೊಂದಿದೆ. ಪರಾಗಸ್ಪರ್ಶ ಕ್ರಿಯೆಗೆ ನೆರವಾಗುವುದು. ಬೀಜ ಪ್ರಸಾರಕ್ಕೆ ನೆರವಾಗುವುದು, ವಾತಾವರಣದ ಉಷ್ಣಾಂಶ ಮತ್ತು ತೇವಾಂಶಗಳ ಸಮತೋಲನೆಯನ್ನು ಕಾಪಾಡುವುದು, ಪರಿಸರವನ್ನು ಸ್ವಚ್ಛವಾಗಿಡುವುದು, ಹೀಗೆ ಅನೇಕ. ಸದಾ ಸಂಚಾಲನೆಯಲ್ಲಿರುವ ಗಾಳಿ, ಮಾನವನು ಸದಾ ಕ್ರಿಯಾಶೀಲನಾಗಿರಬೇಕೆಂಬುದಕ್ಕೆ ಸಾಕ್ಷಿಯಾಗಿದೆ.

### ನೀರು

ನನ್ನ ಸ್ನೇಹಿತ ನೀರಿಲ್ಲದಿದ್ದರೆ ಯಾರೂ ಇಲ್ಲ. ನಾನೂ ಸಹ ನೀರಿಲ್ಲದಿದ್ದರೆ ಬಂಜೆಯಾಗಿ ಬಿಡುತ್ತೇನೆ. ನನಗೆ ಗಂಗೆ ಎಲ್ಲದ್ದಕ್ಕಿಂತ ಹತ್ತಿರದವಳು. ಅವಳನ್ನು ನಾನು ಶೇಖರಿಸಿ ಸಮುದ್ರ, ಸಾಗರ ಕೊಳ್ಳಿಗಳನ್ನು ಮಾಡುತ್ತೇನೆ. ಕೆರೆ, ಕಟ್ಟೆ, ಬಾವಿ ಎಲ್ಲಾ ತರಹದ ಸಣ್ಣ ಪ್ರಮಾಣದ ನೀರಿನ ಉಗ್ರಾಣಗಳನ್ನೂ ಸಹ ಸೃಷ್ಟಿಸುತ್ತೇನೆ. ಗಂಗೆ ಜೊತೆ ಸೇರಿ ನಾನು ಯಾವ ಅವತಾರವನ್ನಾದರೂ ತಾಳಬಲ್ಲೆ. ನನ್ನನ್ನು ಉಪಯೋಗಿಸಿ ಎಲ್ಲಾ ರೂಪದ ದೇವತೆಗಳನ್ನು ಮೂಡಿಸುತ್ತಾರೆ. ಎಲ್ಲಾ ಬೆಳೆಗಳನ್ನು ಬೆಳೆಯುತ್ತಾರೆ. ನನ್ನನ್ನು ಕಾಯಿಸಿ ಎಲ್ಲಾ ಕೆಲಸಗಳಿಗೂ ಉಪಯೋಗಿಸುತ್ತಾರೆ. 'ಮಡಕೆ ಮಾಡುವವನಿಗೆ ಮಣ್ಣೇ ಮೊದಲು' ಎಂದಿದ್ದಾರೆ ಶರಣರು. ಮನುಷ್ಯ, ಪ್ರಾಣಿಗಳು, ಸಸ್ಯಗಳು, ಸೂಕ್ಷ್ಮ ಜೀವಾಣುಗಳು ಇವರೆಲ್ಲಾ ನನ್ನ ಮಕ್ಕಳು. ಮನುಷ್ಯರು ಅತ್ಯಂತ ಸ್ವಾರ್ಥಿ ಮಕ್ಕಳು. ಅದರೇನಂತೆ, ಮಕ್ಕಳು ಮಕ್ಕಳೇ ಅಲ್ಲವೇ? ಅವರಿಗೆ ಬೇಕಾದದ್ದನ್ನೆಲ್ಲಾ ಒದಗಿಸುವ ಸೌಕರ್ಯ– ಸೌಲಭ್ಯಗಳ ಕೊರತೆ ಉಂಟುಮಾಡಿಲ್ಲ. ಆದರೆ ಅವರಲ್ಲಿ (ಕೆಲವರು) ತಮ್ಮ ಸ್ವಾರ್ಥಕ್ಕಾಗಿ ನಾನು ಒದಗಿಸುವ ಸೌಲಭ್ಯಗಳನ್ನು ಕಬಳಿಸಿ, ಗೌಪ್ಯವಾಗಿಟ್ಟು, ಇತರೇ ನನ್ನ ಮುಗ್ಧ ಮಕ್ಕಳಿಗೆ ತೊಂದರೆ ಉಂಟುಮಾಡುತ್ತಾರೆ. ಎಲ್ಲರೂ ನನ್ನನ್ನು ಕಾಪಾಡುತ್ತಾರೆ. ಪರಸ್ಪರ ಸಹಕಾರದಿಂದ ಜೀವಿಸುತ್ತಾರೆ. ಮಾನವನನ್ನು ಹೊರತು ಪಡಿಸಿ! ಅಂತರ್ಜಲವಾಗಿ ಅವಳು ಇಲ್ಲದಿದ್ದರೆ ಏನೂ ನಡೆಯದು. ಯಾವುದೇ ಜೀವಿ ಜೀವಂತವಾಗಿರಲಾರದು ಅವಳ ಮಹತ್ವವನ್ನು ಸರಿಯಾಗಿ ತಿಳಿಯದೆ ಅವಳನ್ನು ಪಾತಾಳಕ್ಕೆ ಕಳುಹಿಸಿರುವುದು ದುರ್ದೈವ. ಅವಳನ್ನು ವೈಜ್ಞಾನಿಕವಾಗಿ ಬುದ್ಧಿವಂತಿಕೆಯಿಂದ ಪಾತಾಳದಿಂದ ಮೇಲೆ ಬರಿಸಿಕೊಂಡರೆ ಜೀವನ ಸುಗಮವಾದೀತು.

### ಗರಿಕೆ

ನನ್ನ ರಕ್ಷಾಕವಚ ಭೂಮಿಯ ಮೇಲಿನ ಅಸಂಖ್ಯಾತ ಸಸ್ಯಗಳು. ಅವುಗಳನ್ನು ಹೆಸರಿಸುವುದಾದರೆ, ಅವುಗಳ ಪೈಕಿ ಮೊದಲನೆಯದು ಗರಿಕೆ ಹುಲ್ಲು. ಈ ಸಸ್ಯಕ್ಕೆ ಹರಿಯಾಲಿ, ದರ್ಬೆ ಹುಲ್ಲು , ಹೀಗೆ ಹೆಸರು ಅನೇಕ. ನನ್ನ ಕವಚವಾಗಿ ಅಷ್ಟೊಂದು ಸಸ್ಯಗಳಿಲ್ಲದಿದ್ದರೆ ಮಳೆ

ಬಿದ್ದ ಕೂಡಲೇ ನಾನು ಕೊಚ್ಚಿಹೋಗಿಬಿಡುತ್ತೇನೆ. ನನ್ನ ಸವಕಳಿ ತಪ್ಪಿಸುವುದರಲ್ಲಿ ಹುಲ್ಲಿನ ಪಾತ್ರ ಬಹಳ ಮಹತ್ತರವಾದುದು. ಪರಿಸರ ಮತ್ತು ಫಲವತ್ತತೆ ಕಾಪಾಡುವಲ್ಲಿ ಹುಲ್ಲಿನ ಮಹತ್ವ ಅರಿತವರು ಅಪರೂಪ. ರಸ್ತೆ ಆಸುಪಾಸುಗಳಲ್ಲಿ ಪಟ್ಟಣಗಳಲ್ಲಿ ಪರಿಸರ ಶುದ್ಧೀಕರಿಸುವ ನೆಪದಲ್ಲಿ ಹುಲ್ಲನ್ನು ಕೆತ್ತಿ ಬಿಸಾಡುವರು. ಇದರಿಂದ ನಾನು ನೀರಿನ ಜೊತೆ ಕೊಚ್ಚಿ ಹೊಗುವುದಲ್ಲದೆ ಗಾಳಿಯಲ್ಲಿ ತೂರಿ ಹೋಗುವೆ. ನನ್ನ ಫಲವತ್ತತೆ ಕುಗ್ಗುವುದು. ಹೀಗೆ ಮಾಡುವುದು ಅವೈಜ್ಞಾನಿಕ. ಬೇರೆ ಸಸ್ಯಗಳನ್ನು ತೆಗೆಯಬೇಕಾದರೂ ಹುಲ್ಲನ್ನು ಮುಟ್ಟಬಾರದು ಎನ್ನುವ ಅರಿವು ಮೂಡಿಸುವವರ ಕೊರತೆಯೇ ಇದಕ್ಕೆ ಕಾರಣ. ಇನ್ನು ಮೇಲಾದರೂ ಇದರ ಬಗ್ಗೆ ಅಂದರೆ ಹುಲ್ಲಿನ ಮಹತ್ವದ ಬಗ್ಗೆ ತಿಳುವಳಿಕೆ ನೀಡುವ ಕಸರತ್ತು ನಡೆಸಿ ನನ್ನನ್ನು ಬೋಳುಮಾಡುವ ಕೆಲಸ ನಿಲ್ಲಿಸಿದರೆ ಸಾರ್ಥಕವಾದೀತು. ನನ್ನ ಮೇಲೆ ಹುಲ್ಲು ಬೆಳೆದು ಹಚ್ಚ ಹಸಿರು 'ಕಾರ್ಪೆಟ್' ತರಹ ಕಾಣಿಸುವುದು ಯಾರಿಗೆ ತಾನೆ ಇಷ್ಟವಾಗುವುದಿಲ್ಲ ಅಷ್ಟೇ ಅಲ್ಲ, ಹುಲ್ಲು ಮತ್ತು ಔಷಧಿಗೂ ಸಲ್ಲುವೆವು ಮತ್ತು ಪೂಜೆಗೂ ಸಲ್ಲುವೆವು. ಇದನ್ನೆಲ್ಲ ಅರಿತು ಎಲ್ಲರೂ ಕೂಡಿ ಬಾಳುವ ಸಂಸ್ಕೃತಿ ಬೆಳೆಸಿದರೆ ಸರ್ವರಿಗೂ ಆನಂದ ನನಗೂ ಆನಂದ ಮತ್ತು ಹುಲ್ಲಿಗೂ ಆನಂದ.

### ಸಾವಯವಾಂಶ

ನನ್ನ ಇನ್ನೊಬ್ಬ ಅಪ್ತ ಸ್ನೇಹಿತ ಸಾವಯವಾಂಶ. ಅವನ ಇಂಗ್ಲೀಷ್ ಹೆಸರು 'ಹ್ಯೂಮಸ್'. ಅವನ ಮಹತ್ವ ತಿಳಿದವರು ಅಪರೂಪ. ಅವನ ಪಾತ್ರ ಅರಿಯದವರು ಅವನನ್ನು ಸರಿಯಾಗಿ ಗಮನಿಸದೆ ಅವನಿಂದ ಪಡೆಯಬಹುದಾದ ಲಾಭವನ್ನು ಕಳೆದುಕೊಂಡು ನಷ್ಟ ಅನುಭವಿಸುವರು. ಅವನನ್ನು ಉಳಿಸಿ ಬೆಳೆಸುವುದು ಬಹಳ ಸುಲಭ. ಅವನೊಡನೆ ಸದಾ ಸಾವಿರಾರು ಸೂಕ್ಷ್ಮ ಜೀವಿಗಳು ಗುಂಪಾಗಿ ಒಟ್ಟಿಗೇ ಬೆಳೆದು ನನಗೆ ಫಲವತ್ತತೆಯನ್ನು ನೀಡುವರು; ಅಂದರೆ ನನ್ನನ್ನು ಸಂಪದ್ಭರಿತನಾಗಿ ಮಾಡುವರು.

### ನನ್ನ ಸಂತಾನ

ನಾನು ಸಂತಾನಪ್ರಿಯೆ. ನನ್ನ ಸಂತಾನ ಎಣಿಸಲಾಗದಷ್ಟಿದೆಯಲ್ಲದೆ, ವಿಸ್ಮಯಕಾರಿ ಎಂದು ಹೇಳುವಷ್ಟು ವೈವಿಧ್ಯಮಯ. ಕಣ್ಣಿಗೆ ಕಾಣಿಸದ ಸೂಕ್ಷ್ಮಾಣು ಜೀವಿ (ವೈರಸ್) ಗಳಿಂದ ಹಿಡಿದು, ಆನೆಯಂತಹ ಗಾತ್ರವುಳ್ಳ ಪ್ರಾಣಿಗಳವರೆಗೂ, ಕಣ್ಣಿಗೆ ಕಾಣಿಸುವ ಹಾಗೂ ಕಾಣಿಸದ ಜೀವಿಗಳೆಲ್ಲಾ ನನ್ನ ಸಂತಾನವೇ! ನನ್ನ ಸಂತಾನ ಸಮೂಹದಲ್ಲಿ ಅಪಾಯಕಾರಿ ಜೀವಿಗಳೂ ಇದ್ದಾರೆ! ಅವುಗಳ ಪೈಕಿ ಮನುಷ್ಯನೇ ಮೊದಲನೆಯವನು. ಆ ನಂತರ ಕೆಲವು ಸಸ್ಯಗಳು– ಲಾಂಟನ, ಪ್ರೋಸೋಫಿಸ್, ಯುಪಟೋರಿಯಂ, ಅಜರೇಟಂ ಮುಂತಾದವು ಸುಮಾರು ವರ್ಷಗಳಿಂದ ಇವೆ. ಸುಮಾರು 5 ದಶಕಗಳ ಹಿಂದೆ ಲ್ಯಾಟಿನ್ ಅಮೇರಿಕಾದಿಂದ ನಮ್ಮ ನಾಡಿಗೆ ಕಾಲಿಟ್ಟ ಹೆಚ್ಚು ಆಕ್ರಮಣಕಾರಿ ಹಾಗೂ ಅಪಾಯಕಾರಿ ಕಳೆ ಪಾರ್ಥೇನಿಯಂ. ಒಂದೇ ಸಸ್ಯದಿಂದ 15000 ದವರೆಗೂ ಬೀಜ ಉತ್ಪಾದಿಸಬಲ್ಲ ಈ ಕಳೆ ತನ್ನ ರಸವನ್ನು ಮಣ್ಣಿಗೆ ಸೇರಿಸಿ ಇತರೇ ಯಾವುದೇ ಸಸ್ಯವೂ ಮೊಳೆತು ಬೆಳೆಯದಂತೆ ಮಾಡಿ, ತನ್ನದೇ ಪ್ರಭುತ್ವವನ್ನು ಸಾದಿಸುವುದಲ್ಲದೆ, ಜನಜಾನುವಾರುಗಳಿಗೆ ಅಲರ್ಜಿ ಉಂಟುಮಾಡಿ, ವಿವಿಧ ವ್ಯಾಧಿಗಳಿಗೆ ಮೂಲವಾಗಿ, ವಿನಾಶಕಾರಿ 'ಕಾಂಗ್ರೆಸ್ ಹುಲ್ಲು' ಎಂದೇ ಹೆಸರುವಾಸಿಯಾಗಿದೆ. ಈ ಖದೀಮನನ್ನು ಹತೋಟಿಯಲ್ಲಿಡಬೇಕೆಂದೇ ಕೆಲವು ಶತ್ರು ಸಸ್ಯಗಳು ನನ್ನ ಸಂತಾನದ ಸಾಲಿನಲ್ಲಿರುವುದು ಸಮಾಧಾನ ಉಂಟುಮಾಡಿದೆ. ಅದರೇನಂತೆ, ಇದನ್ನು ತಿಳಿಯುವ ಗೋಜಿಗೆ ಹೋಗದೆ ಮನುಷ್ಯ ಇಂತಹ ಸಸ್ಯ ಶತ್ರುಗಳನ್ನು ನಿರ್ದಾಕ್ಷಿಣ್ಯವಾಗಿ ಕಿತ್ತು ಬಿಸಾಡಿ ಪಾರ್ಥೇನಿಯಂ ಬೆಳೆಯಲು ಅವಕಾಶ ಕಲ್ಪಿಸುತ್ತಾ ಇದ್ದಾನೆ. ನನ್ನ ಮಕ್ಕಳೆಲ್ಲರೂ ಚೆನ್ನಾಗಿ ಬಾಳಿ ಬದುಕಬೇಕೆಂಬುದೇ ನನ್ನ ಮಹದಾಸೆ ಎಲ್ಲ ತಾಯಿಯರಂತೆ.

### ನನ್ನ ಆರೋಗ್ಯ

ನಾನು ಜೀವಂತ ಎಂದ ಮೇಲೆ ಎಲ್ಲರಂತೆ ನನಗೂ ಅರೋಗ್ಯ ಕೆಡುವುದು ಸಹಜವಲ್ಲವೆ? ಮನುಷ್ಯನ ದುರಾಸೆ ಹಾಗೂ ವೈಜ್ಞಾನಿಕ ಪದ್ಧತಿಗಳಿಂದಾಗಿ ಮನುಷ್ಯನ ಮಿತಿಮೀರಿದ ರಸವಸ್ತುಗಳ ಬಳಕೆಯಿಂದ ಪೋಷಕಾಂಶಗಳ ಸಾರ ಮತ್ತು ಕೊರತೆ ಎರಡೂ ನನ್ನನ್ನು ಕಾಡಿಸುವಷ್ಟು ಸನ್ನಿವೇಶಗಳು ಇತ್ತೀಚೆಗಷ್ಟೇ ಸೃಷ್ಟಿಯಾಗಿರುವುದು ನನಗೆ ಆತಂಕ ಉಂಟುಮಾಡಿದೆ. ಇದೀಗ ಅಲ್ಲಲ್ಲಿ ನನ್ನ ಸ್ಥಿತಿಯನ್ನು ಅರಿತು ನನ್ನನ್ನು ಪರೀಕ್ಷಿಸುವ ಪದ್ಧತಿ ಅನುಕರಣೆಯಾಗುತ್ತಿರುವುದು ನನಗೆ ಸಂತಸ ಉಂಟುಮಾಡಿದೆ. ನನ್ನನ್ನು ಪ್ರಯೋಗಾಲಯಗಳಲ್ಲಿ ಪರೀಕ್ಷೆಗೊಳಪಡಿಸಿ ನನ್ನಲ್ಲಿರುವ ಕೊರತೆ, ದೋಷ ಮುಂತಾದವುಗಳನ್ನರಿತು ಪೋಷಿಸಲಾಗುತ್ತಿರುವುದು ಸಮಾಧಾನ ತಂದಿದೆ. ಸದ್ಯಕ್ಕೆ ಅಂತಹವರು ಬೆರಳೆಣಿಸುವಷ್ಟು. ನನ್ನ ಆರೋಗ್ಯವನ್ನು ತೃಪ್ತಿಕರವಾಗಿಡಲು 16 ಪೋಷಕಾಂಶಗಳು ಅವಶ್ಯಕ. ನನ್ನ ವಿವಿಧ ಸಂತಾನಗಳಿಗೆ ಬೇಕಾಗಿರುವ ಪ್ರಮಾಣ ಬೇರೆ ಬೇರೆಯಾದ್ದರಿಂದ ಪೋಷಕಾಂಶಗಳನ್ನು ವೈಜ್ಞಾನಿಕವಾಗಿ ಪೂರೈಸುವುದು ಬಹಳ ಮುಖ್ಯ. ನನ್ನ ಆತ್ಮ ಸ್ನೇಹಿತ ಸಾವಯವಾಂಶದ ಮಹತ್ವದ ಬಗ್ಗೆ ಈಗಾಗಲೇ ಪರಿಚಯಿಸಿದ್ದೇನೆ. ನನ್ನಲ್ಲಿರುವ ಕೊರತೆಯನ್ನು ನನ್ನ ಸಂತಾನಗಳ ಮೈಬಣ್ಣ ಮತ್ತು ಬೆಳವಣಿಗೆಯ ವೇಗದಿಂದ ಸುಲಭವಾಗಿ ಗುರುತಿಸಬಹುದು. ನನ್ನ ಆರೋಗ್ಯದ ಕಡೆ ಗಮನವಿಟ್ಟು ನನ್ನನ್ನು ಸಧೃಡವಾಗಿರುವಂತೆ ನೋಡಿಕೊಂಡವರಿಗೆ ನಾನು ತೃಪ್ತಿಕರವಾದ ಇಳುವರಿ ಪಡೆದು ಲಾಭದಾಯಕ ಫಸಲು ತೆಗೆಯಲು ನೆರವಾಗುತ್ತೇನೆ. ನನ್ನ ಖಾಯಿಲೆಯನ್ನು ತಿಳಿಯಬಲ್ಲ ಪ್ರಯೋಗಾಲಯಗಳು ಕೃಷಿ ವಿಜ್ಞಾನ ಕೇಂದ್ರಗಳ, ಕೃಷಿವಿಶ್ವವಿದ್ಯಾನಿಲಯಗಳ ಹಾಗೂ ಸರ್ಕಾರಿ ಕೃಷಿ ಇಲಾಖೆಗಳ ಆಶ್ರಯದಲ್ಲಿರುವುದನ್ನು ಗಮನಿಸಿ, ನನ್ನನ್ನು ಪೋಷಿಸಲಿಚ್ಚಿಸುವವರು ನನ್ನ ಯೋಗಕ್ಷೇಮ ನೋಡಿಕೊಂಡರೆ ಹಾಗೂ ಪ್ರಸಾರ ಮಾಧ್ಯಮದವರು ನನ್ನ ಕಡೆ ಇನ್ನಷ್ಟು ಗಮನ ಹರಿಸಿ ಸಹಕರಿಸಿದರೆ ನಾನೇ ಧನ್ಯಳು.

### ಒಂದು ಕೋರಿಕೆ

ನನ್ನ ಈ ಕೋರಿಕೆಯನ್ನು ನೀವು ಊಹಿಸಲಾರಿರಿ. ನನ್ನ ಬಗ್ಗೆ ತಿಳಿಯಬಯಸುವವರಿಗೆ ಸರಿಯಾದ ಪುಸ್ತಕಗಳಿಲ್ಲ. ಪ್ರಸಾರ ಮಾಧ್ಯಮಗಳು ನನ್ನನ್ನು ನಿರ್ಲಕ್ಷಿಸುವೆ. ಮಕ್ಕಳೇ ಆಗಲಿ. ಯಾವ ವಯಸ್ಸಿನವರೇ ಆಗಲಿ, ಸಿನಿಮಾ ನಟನಟಿಯರ ಬಗ್ಗೆ, ಕ್ರಿಕೆಟ್ ಪಟುಗಳ ಬಗ್ಗೆ ತಿಳಿದುಕೊಂಡಿರುವಷ್ಟು ನನ್ನ ಬಗ್ಗೆ ತಿಳಿದುಕೊಂಡಿಲ್ಲ. ನಮ್ಮ ನಾಡಿನ ಪಠ್ಯ ಪುಸ್ತಕಗಳಲ್ಲಂತೂ ನಾನು ಕಾಣಿಸುವುದೇ ಅಪರೂಪ. ನನ್ನ ಸ್ನೇಹಿತರಾದ ಪರಿಸರ ಮತ್ತು ನನ್ನ ಸಂತಾನದ ಬಗ್ಗೆಯೂ ನಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಪುಸ್ತಕ ಮತ್ತು ಪಠ್ಯಕ್ರಮಗಳು ನೀಡುತ್ತಿಲ್ಲ. ಅದಕ್ಕಾಗಿ ಸಾಕಷ್ಟು ಗಮನ ನೀಡದಿರುವ ಸರ್ಕಾರದ ಮೇಲೆ ನನಗೆ ಅತೃಪ್ತಿ ಮತ್ತು ಬೇಸರವಿದೆ.

■ **ಪ್ರೊ. ಎಂ. ಮಹದೇವಪ್ಪ**
ನಿರ್ದೇಶಕರು,
ಗ್ರಾಮೀಣಾಭಿವೃದ್ಧಿ ವಿಭಾಗ
ಜೆಎಸ್ಎಸ್ ಮಹಾವಿದ್ಯಾಪೀಠ,
ಮೈಸೂರು 570 004

# ನಗರ ಮನೆ ತೋಟಗಳು–ಜಾಗದ ಸೂಕ್ತ ಉಪಯೋಗ

■ **ಕೆ ವಿ ಎಸ್ ಪ್ರಸಾದ್**

ನಗರ ಪ್ರದೇಶಗಳು ವೇಗವಾಗಿ ಯಾಂತ್ರಿಕವಾದ ಕಾಂಕ್ರಿಟ್ ಕಾಡುಗಳಾಗುತ್ತಿವೆ. ಆಧುನಿಕತೆಗೆ ಒತ್ತು ನೀಡಿ, ಸಾಂಪ್ರದಾಯಿಕ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯದ ಜಾಗಗಳನ್ನು ಉಳಿಸುವಲ್ಲಿ ಅನಾದರ ತೋರಲಾಗುತ್ತಿದೆ. ಬೆಂಗಳೂರೂ ಇದಕ್ಕೆ ಹೊರತಲ್ಲ. ವಾಸ್ತವ ಎಂದರೆ, ಬೆಂಗಳೂರು ಸೂಕ್ತ ವಾತಾವರಣ, ಮೂಲಸೌಕರ್ಯ ಸೌಲಭ್ಯ ಮತ್ತು ಎಲ್ಲ ದಿಕ್ಕುಗಳಲ್ಲಿ ಬೆಳೆಯುವ ಅವಕಾಶ ಇರುವುದರಿಂದ ಬೇರೆ ನಗರಗಳಿಗಿಂತ ವೇಗವಾಗಿ ಬೆಳೆಯುತ್ತಿದೆ. ಆದರೆ, ಬೆಂಗಳೂರನ್ನು ಇನ್ನೂ ಗಾರ್ಡನ್ ಸಿಟಿ ಎಂದೇ ಗುರುತಿಸುತ್ತಾರೆ. ನಗರದ ಮಧ್ಯದಲ್ಲಿ ಸರ್ಕಾರ ನಿರ್ವಹಿಸುತ್ತಿರುವ ತೋಟಗಳಿವೆ; ವಸತಿ ಲೇಔಟ್‌ಗಳ ಭಾಗವಾಗಿ ಪಾರ್ಕ್‌ಗಳಿವೆ.

ಕೆಲವೊಂದು ಭಾಗಗಳಲ್ಲಿ ಇನ್ನೂ ಇರುವ ತೋಟದ ಸಂಸ್ಕೃತಿಯನ್ನು ರಕ್ಷಿಸಿ ಬೆಳೆಸಲು ಮತ್ತು ನಾಗರಿಕರು ಆರೋಗ್ಯಕರ ತರಕಾರಿ ಬೆಳೆಸಲು ಅನುಕೂಲವಾಗುವಂತೆ, ಬೆಂಗಳೂರಿನಲ್ಲಿರುವ ಪರಿಸರ ಕೃಷಿಯನ್ನು ಪ್ರೋತ್ಸಾಹಿಸುವ ಸಂಸ್ಥೆ ಎಎಂಇ ಫೌಂಡೇಷನ್, ಕೆಲವು ಉಪಕ್ರಮಗಳನ್ನು ಕೈಗೊಂಡಿದೆ. 2007ರಲ್ಲಿ ಡಾ.ವಿಶ್ವನಾಥ್ ಅವರ ನೆರವಿನಿಂದ, ನಾಗರಿಕರಿಗೆ ಮೇಲ್ಛಾವಣಿ, ಹಿತ್ತಿಲು, ಮನೆಯ ಮುಂಭಾಗ, ಬಾಲ್ಕನಿ ಮುಂತಾದ ಲಭ್ಯ ಜಾಗದಲ್ಲಿ ತರಕಾರಿ ಮತ್ತು ಸಸ್ಯಗಳನ್ನು ಪರಿಸರ ಸ್ನೇಹಿಯಾಗಿ ಬೆಳೆಯುವ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಈ ಒಂದು ದಿನ ಶಿಬಿರ ನಾಗರಿಕರಿಗೆ ಪ್ರಾಯೋಗಿಕವಾಗಿ ತರಕಾರಿಗಳನ್ನು ಬೆಳೆಯುವ ಕಲೆಯನ್ನು ಕಲಿಯಲು ನೆರವಾಯಿತು. ಈಗಿನವರೆಗೂ, ಸುಮಾರು 500 ನಾಗರಿಕರು ಮೇಲ್ಛಾವಣಿ ಸಾವಯವ ತೋಟಗಾರಿಕೆಯಲ್ಲಿ ತರಬೇತಿ ಪಡೆದಿದ್ದಾರೆ. ಅವರಲ್ಲಿ ಹೆಚ್ಚಿನವರು ಐಟಿ ಉದ್ಯೋಗದಲ್ಲಿ ತೊಡಗಿರುವ ಯುವಕರು ಮತ್ತು ತೋಟಗಾರಿಕೆಯನ್ನು ಹವ್ಯಾಸವನ್ನಾಗಿ ಬೆಳೆಸಿಕೊಳ್ಳುವ ಅಭಿಲಾಷೆ ಉಳ್ಳವರು.

ಮೇಲ್ಛಾವಣಿ ತೋಟಗಾರಿಕೆಯಲ್ಲಿ ಎಎಂಇಎಫ್ ಪ್ರಯಾಣ 2006ರಲ್ಲಿ ಆರಂಭವಾಗಿದ್ದು ನಗರದ ಹೊರವಲಯದ ಕೃಷಿ ಉಪಕ್ರಮಗಳಿಂದ. ಆರ್‌ಯುಎಎಫ್‌ನ ಭವಿಷ್ಯದ ಕಾರ್ಯಕ್ರಮಗಳಿಗೆ ನಗರಗಳು ಎನ್ನುವ ಕಾರ್ಯಕ್ರಮದ ಭಾಗವಾಗಿ, ಎಎಂಇಎಫ್ ಹೊರವಲಯದ ಕೃಷಿ ಮತ್ತು ನಗರ ತೋಟಗಾರಿಕೆಯನ್ನು ಪ್ರೋತ್ಸಾಹಿಸಿತು. ಐಡಬ್ಲ್ಯುಎಂಐ, ಎಎಂಇಎಫ್ ಜಂಟಿಯಾಗಿ ಅನ್ವೇಷಣೆಗಳನ್ನು ಕೈಗೊಂಡಿತು. ಕೇವಲ ಸರ್ವೇ ಮತ್ತು ಅಧ್ಯಯನಗಳಿಂದ ತೃಪ್ತಿ ಪಡದೆ, ಮನೆ ತೋಟಗಳ ಮೇಲಿನ ವ್ಯಾವಹಾರಿಕ ಕಾರ್ಯಕ್ರಮ ರೂಪಿಸಿತು.

ನಿವಾಸಿ ಸಂಘಗಳನ್ನು ಗುರುತಿಸಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಅಡಿಗೆ ಮನೆಯ ಕೊಳೆಯಬಲ್ಲ ಕಸವನ್ನು ಗೊಬ್ಬರವನ್ನಾಗಿ ಮಾಡಲು ಕೆಲವರು ಆಸಕ್ತಿ ತೋರಿಸಿದರು. ತಮ್ಮ ಅನುಭವಗಳನ್ನು ಹಂಚಿಕೊಂಡು ಕೆಲವು ನಾಗರಿಕರು ಮುಂದಾಳತ್ವ ಪಡೆದರು. ಮಹಿಳಾ ಸ್ವಸಹಾಯ ಗುಂಪುಗಳಿಗೆ ನರ್ಸರಿಗಳ ಬಗ್ಗೆ ತರಬೇತಿ ನೀಡುವ ಪ್ರಯತ್ನವೂ ನಡೆಯಿತು. ನಂತರ, ಎಫ್‌ಎಒ ವಾಷಿಂಗ್ಟನ್ ಜೊತೆಗೂಡಿ, ಎಎಂಇಎಫ್ ಮೇಲ್ಛಾವಣಿ ತೋಟವನ್ನು ಪ್ರೋತ್ಸಾಹಿಸುವ ಸೂಕ್ತ ಸಾಧನವನ್ನು ಪರಿಶೀಲಿಸಿತು.

## ವೇಗ ಪಡೆದುಕೊಂಡಿದ್ದು

ಕೆಲವು ಸಾರ್ವಜನಿಕ ಸಭೆಗಳಲ್ಲಿ ನಾಗರಿಕರು ತರಕಾರಿ ಬೆಳೆಯುವ ಮಹತ್ವ ಬಗ್ಗೆ ನಗರ ಯೋಜಕರ ಗಮನಕ್ಕೆ ತರಲಾಯಿತು. ತೋಟಗಾರಿಕಾ ಪ್ರದರ್ಶನಗಳಲ್ಲಿ ಭಾಗವಹಿಸುವುದು ಮತ್ತು ಕಚೇರಿಯ ಕಟ್ಟಡದ ಮೇಲ್ಛಾವಣಿ ಮೇಲೆ ಪ್ರದರ್ಶನಕ್ಕಾಗಿ ಪ್ರಾಯೋಗಿಕ ತೋಟಗಾರಿಕೆಯನ್ನು ನಿರ್ವಹಿಸುವುದರ ಮೂಲಕ ಪ್ರೋತ್ಸಾಹದ ಪ್ರಯತ್ನಗಳನ್ನು ಮಾಡಲಾಯಿತು.

ತರಬೇತಿ ಪಡೆದ ಅನೇಕರು ಇ–ಸಂವಾದಗಳ ಮೂಲಕ ಈ ಚಟುವಟಿಕೆಗೆ ಹೊಸ ಶಕ್ತಿ ತುಂಬಿದರು. ಅವರಲ್ಲಿ ಕೆಲವರು ತಾವೇ ಕೋರ್ಸ್‌ಗಳನ್ನು ಆರಂಭಿಸುವುದಾಗಿ ಹೇಳಿದರು.

ಡಾ.ವಿಶ್ವನಾಥ್ ಪ್ರವರ್ತಕರಾಗಿ, ಈ ಕೆಲವು ನಾಗರಿಕರು ಅತ್ಯಂತ ಉತ್ಸಾಹದಿಂದ ಸಹಚಿಂತಕ ವ್ಯಕ್ತಿಗಳ ಜೊತೆ ಸೇರಿಕೊಂಡು ಹಲವು ಹೆಜ್ಜೆ ಮುಂದೆ ಸಾಗಿ ಗಾರ್ಡನ್ ಸಿಟಿ ಫಾರ್ಮರ್ಸ್ ಗ್ರೂಪ್ ಸ್ಥಾಪಿಸಿದ್ದಾರೆ. ಈ ಗುಂಪು ನಗರದಲ್ಲಿ ಹಲವು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದರ ಜೊತೆಗೆ ವಿಶ್ವಸ್ಥ ಮಂಡಳಿಯಾಗಿ ಪರಿವರ್ತನೆಗೊಂಡಿದೆ. 'ಊಟ ಫ್ರಮ್ ಯುವರ್ ತೋಟ' ಅಂದರೆ, ನಿಮ್ಮ ತೋಟದಿಂದ ಊಟ ಎನ್ನುವ ಸಾರ್ವಜನಿಕ ಅತ್ಯಂತ ಯಶಸ್ವಿ ಕಾರ್ಯಕ್ರಮ. ಈ ಕಾರ್ಯಕ್ರಮವನ್ನು ನಿಯಮಿತವಾಗಿ ಹಮ್ಮಿಕೊಳ್ಳಲಾಗುತ್ತಿದ್ದು, ಹಲವಾರು ಅರ್ಥಪೂರ್ಣ ಸಂವಾದಗಳಿಗೆ ಅದು ವೇದಿಕೆಯಾಗಿದೆ ಮತ್ತು ಕಾರ್ಯಕ್ರಮದ ಸ್ಥಳ ಒಂದೇ ವೇದಿಕೆಯಡಿ ಪರಿಸರ ಸ್ನೇಹಿ ವಸ್ತುಗಳ ಮಾರುಕಟ್ಟೆ ಜಾಗವಾಗುತ್ತದೆ. ನಾಗರಿಕ ವಿಷಯಗಳು, ಈ ಗುಂಪು ತೆಗೆದುಕೊಳ್ಳುವ ಇನ್ನೊಂದು ಉಪಕ್ರಮ. ಇಲ್ಲಿ ತೋಟಗಾರಿಕೆ ಉತ್ಸಾಹಿಗಳ ನಡುವೆ ಸುದ್ದಿ ಮತ್ತು ಮಾಹಿತಿಗಳನ್ನು ಹಂಚಿಕೊಳ್ಳಲಾಗುತ್ತದೆ. ◆

■ **K V S Prasad**
Executive Director, AME Foundation
and Chief Editor, LEISA India
Email: leisaindia@yahoo.co.in

ಸಂಪನ್ಮೂಲ ನಿರ್ವಹಣೆಯ ಸಾಂಪ್ರದಾಯಿಕ ಪದ್ಧತಿಗಳು ಸಂರಕ್ಷಣೆಯ ಮೌಲ್ಯ ಮತ್ತು ನೀತಿಗಳನ್ನು ಒಳಗೊಂಡಿದ್ದರೂ, ಅಧಿಕೃತವಾಗಿ ಪರಿಗಣಿಸಲ್ಪಟ್ಟಂಥ ಪದ್ಧತಿಗಳಲ್ಲಿ ಸ್ವಲ್ಪ ಮಟ್ಟಿಗೆ ಕೊರತೆ ಕಂಡುಬರುತ್ತದೆ. ಒರಿಸ್ಸಾದ ದೇವಿ ನದಿ ತಟದಲ್ಲಿ ನಡೆದಿರುವ ಸಾಮುದಾಯಿಕ ಸಂರಕ್ಷಣೆ ಉಪಕ್ರಮಗಳು ಇದನ್ನು ಸೂಚಿಸುತ್ತದೆ. ಇದನ್ನು ಕಡೆಗಣಿಸುವುದು ಅಥವಾ ಪರ್ಯಾಯ ಮಾದರಿ ಹೇರುವ ಬದಲು, ಈ ಉಪಕ್ರಮಗಳ ಮೌಲ್ಯಗಳನ್ನು ಅರಿತುಕೊಂಡು ಅದಕ್ಕೆ ಕಾನೂನಾತ್ಮಕ ಪರಿಗಣನೆ ಮತ್ತು ಸಹಾಯ ನೀಡುವುದು ಮುಖ್ಯ.

# ಹಸಿರು ಸೇನಾನಿಗಳು

## ಒರಿಸ್ಸಾದಲ್ಲಿ ಸಾಮುದಾಯಿಕ ಉಪಕ್ರಮಗಳಿಂದ ಸ್ಥಳೀಯ ಜೈವಿಕ ವೈವಿಧ್ಯವನ್ನು ಸಂರಕ್ಷಿಸಿರುವುದು



ಸ್ಥಳೀಯ ಸಮುದಾಯಗಳ ಪರಿಸರ ಸಂರಕ್ಷಣಾ ಕಾರ್ಯದಿಂದ ಪುನರುಜ್ಜೀವನಗೊಂಡ ಕಾಂಡ್ಲಾ ಅರಣ್ಯ

■ **ಶ್ವೇತಾ ಮಿಶ್ರಾ**

ದೇವಿ ನದಿ. ಒರಿಸ್ಸಾದ ರಾಜಧಾನಿ ಭುವನೇಶ್ವರದಿಂದ 60 ಕಿಲೋ ಮೀಟರ್ ದೂರದಲ್ಲಿದೆ. ಅದು ಪ್ರಾಕೃತಿಕ, ಐತಿಹಾಸಿಕ ಮತ್ತು ಆರ್ಥಿಕವಾಗಿ ವಿಶೇಷ ಮಹತ್ವ ಪಡೆದಿದೆ. ದೇವಿ ನದಿ ಮುಖ (ನದಿ ಸಮುದ್ರವನ್ನು ಸೇರುವ ಜಾಗ) ಒರಿಸ್ಸಾದಲ್ಲಿ Olive Ridley turtle ಪಕ್ಷಿಗಳ ಗೂಡುಗಳು ಯಥೇಚ್ಛವಾಗಿ ಸಿಗುವ ಸ್ಥಳ. ಅದು ಅನೇಕ ಸ್ಥಳೀಯ ಮತ್ತು ವಲಸೆ ಹಕ್ಕಿಗಳ ಸಂಕುಲಗಳಿಗೆ ವಾಸಸ್ಥಳ. ಸುತ್ತಲಿನ ಕಾಡು ಹರಿಣ, ಕತ್ತೆ ಕಿರುಬ, ನರಿ ಮುಂತಾದ ಅನೇಕ ಕಾಡುಮೃಗಗಳ ಆಶ್ರಯ ತಾಣ. ಈ ಜೀವ ವೈವಿಧ್ಯ ಸ್ಥಳೀಯ ಸಮುದಾಯಗಳ ಜೀವನಾಧಾರಕ್ಕೆ ಮತ್ತು ಸುಖಸಮೃದ್ಧಿಗೆ ಅಗಣಿತ ಮೌಲ್ಯ ತುಂಬುತ್ತದೆ.

ಸುತ್ತಲಿನ 36 ಬೆಸ್ತ ಹಳ್ಳಿಗಳ ಸುಮಾರು 15000 ಬೆಸ್ತರು ತಮ್ಮ ಜೀವನಾಧಾರಕ್ಕೆ ಈ ನದಿಯನ್ನೇ ನಂಬಿಕೊಂಡಿದ್ದಾರೆ. ಮೀನುಗಾರಿಕೆಯಿಂದ ಪ್ರತಿಯೊಬ್ಬ ಮೀನುಗಾರ ತಿಂಗಳಿಗೆ ಅಂದಾಜು ಸರಾಸರಿ 10000 ದಿಂದ 12000 ರೂಪಾಯಿವರೆಗೆ ಗಳಿಸಬಹುದು. 2003 ಮತ್ತು 2009ರಲ್ಲಿ ಕಡುವಾ ಮತ್ತು ದೇವಿ ನದಿಗೆ ಬಂದ ಪ್ರವಾಹ ಗುಂಡಾಲ್ಬಾ ಮತ್ತು ಸುತ್ತಲಿನ ಹಳ್ಳಿಗಳ ಸಾವಿರಾರು ಎಕರೆಯಲ್ಲಿ ಬೆಳೆ ಮೇಲೆ ಗಂಭೀರ ಪ್ರಮಾಣದ ಹಾನಿ ಉಂಟುಮಾಡಿತ್ತು. ಮೀನುಗಾರರು ಮತ್ತು ಇತರೆ ರೈತರಿಗೆ ಯಾವುದೇ ಪರಿಹಾರ ಸಿಗಲಿಲ್ಲ. ಮತ್ತು ಇನ್ನೂ ಅನೇಕರ ಭೂಮಿ ನೀರಿನಲ್ಲಿ ಮುಳುಗಿ ಹೋಗಿದೆ. ಯಾರು ಕೃಷಿ ಅಥವಾ ಮೀನುಗಾರಿಕೆ ಮಾಡುತ್ತಿಲ್ಲವೋ ಅವರು ವಲಸೆ ಹೋಗಿ ಬೇರೆ ರಾಜ್ಯಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಸರ್ಕಾರದ ಸಂರಕ್ಷಣಾ ಆದ್ಯತೆಗಳು ಮತ್ತು ಆ ಪ್ರದೇಶದ ಸಮುದಾಯಗಳ ಜೀವನಾಧಾರದ ನಡುವಿನ ಸಂಘರ್ಷಕ್ಕೆ ನಿದರ್ಶನವೆಂದರೆ, ಕಳೆದ ಆರು ತಿಂಗಳ ಅವಧಿಯಲ್ಲಿ ನವಂಬರ್ 1– ಮೇ 31ರ ವರೆಗೆ ಕಡಲಾಮೆ ಮರಿಹಾಕುವ ಅವಧಿಯಲ್ಲಿ ಸರ್ಕಾರ ಮೀನುಗಾರಿಕೆಗೆ ನಿಷೇಧ ಹೇರಿದ್ದು. 240 ಮೀನುಗಾರಿಕೆ ದಿನದ ಅವಧಿಯಲ್ಲಿ ಆಮೆಗಳ ಸಂರಕ್ಷಣೆಗೆ ಹೇರಿದ 180 ದಿನಗಳ ನಿರ್ಬಂಧ ಜೀವನಾಧಾರಕ್ಕೆ ಮೀನುಗಾರಿಕೆಯನ್ನೇ ನೆಚ್ಚಿಕೊಂಡಿರುವ ಸಾಂಪ್ರದಾಯಿಕ ಮೀನುಗಾರರ ಮೇಲೆ ಗಂಭೀರ ಪರಿಣಾಮ ಉಂಟುಮಾಡುತ್ತದೆ. ಪ್ರತಿವರ್ಷ ಈ ಸಮುದಾಯಗಳಿಗಾದ ನಷ್ಟ 403.70 ದಶಲಕ್ಷ ರೂಪಾಯಿಗಳು.

ಆಲಿವ್ ರಿಡ್ಲೇ ಆಮೆಗಳ ಸಾಮೂಹಿಕ ಗೂಡು ಕಟ್ಟುವ

## ಸಮುದಾಯ ಸಂರಕ್ಷಣಾ ಉಪಕ್ರಮಗಳ (ಸಿಸಿಐ) ಒಂದು ಪಕ್ಷಿನೋಟ

ಪರಿಸರ, ಸೂಕ್ಷ್ಮ ಮತ್ತು ನಶಿಸಿಹೋಗುತ್ತಿರುವ ಕಾಡುಮೃಗಗಳ ವಾಸಸ್ಥಾನ ಉಳಿಸಲು ಸಿಸಿಐಗಳು ಬಹು ಮಹತ್ತರ ಪಾತ್ರ ವಹಿಸುತ್ತವೆ. ಅನೇಕವು ವನ್ಯಜೀವಿ ಕಾರಿಡಾರ್ ರೀತಿಯಲ್ಲಿ ಕಾರ್ಯನಿರ್ವಹಿಸಿ, ಸರ್ಕಾರಿ ಸಂರಕ್ಷಿತ ಪ್ರದೇಶಗಳಿಗೆ ಜೈವಿಕ ಕೊಂಡಿಗಳ ರೀತಿಯಲ್ಲಿ ವರ್ತಿಸುತ್ತವೆ. ಪರಿಸರದ ಸೇವೆಗಳಾದ ಮಣ್ಣು ಸಂರಕ್ಷಣೆ, ನೀರು ಭದ್ರತೆ ಮತ್ತು ಸಾಂಪ್ರದಾಯಿಕ ಬೆಳೆ ಪದ್ಧತಿ ಸಂರಕ್ಷಣೆ ಮಂತಾದವನ್ನು ಕಾಪಾಡಲು ಕೆಲವೊಂದು ಕಾರಣ. ಅವು ಸಾಂಪ್ರದಾಯಿಕ ಕೃಷಿ ಪದ್ಧತಿ ಮತ್ತು ಕಾಡಿನ ಪರಿಸರದ ನಡುವಿನ ಸಂಬಂಧವನ್ನು ಜೋಡಿಸುತ್ತದೆ. ಕೆಲವು ಸಿಸಿಐಗಳ ಬಹುಮುಖ್ಯ ಅಂಶ ಸ್ಥಳೀಯ ಆರ್ಥಿಕತೆ; ಉಳಿವಿಗೆ ಮತ್ತು ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳು ಮತ್ತು ಅವುಗಳ ಉಪಯೋಗಗಳಿಗೆ ಸಾವಿರಾರು ಜನ ಆ ಉಪಕ್ರಮಗಳ ಮೇಲೆ ಅವಲಂಬಿತರಾಗಿರುತ್ತಾರೆ. ಸಿಸಿಐಗಳನ್ನು ಸಾಂಪ್ರದಾಯಿಕ ಜ್ಞಾನ ಮತ್ತು ಸಂರಕ್ಷಣಾ ವಿಜ್ಞಾನದಲ್ಲಿ ಪ್ರಸ್ತುತ ಬೆಳವಣಿಗೆಗಳನ್ನು ಜೋಡಿಸುವುದರ ಮೇಲೆ ನಿರ್ಮಿತವಾದ ಸಮುದಾಯ ಆಧಾರಿತ ಅಭಿವೃದ್ಧಿ ಮಾದರಿ ಎಂದು ಪರಿಗಣಿಸಬಹುದು.

ಪ್ರದೇಶದ ಜೊತೆಗೆ, ಆ ಪ್ರದೇಶ ಕಾಂಡ್ಲಾ ಅರಣ್ಯ ಪ್ರದೇಶವನ್ನು ಹೊಂದಿದೆ. ಕಡಲಕೊರೆತ ತಡೆಗಟ್ಟುವಲ್ಲಿ, ಅನೇಕ ಬಗೆಯ ಮೀನು ಮತ್ತು ಏಡಿಗಳ ಬೆಳೆಯುವ ತಾಣಗಳಾಗಿ ಮತ್ತು ಜನಜೀವನ ಮತ್ತು ಪರಿಸರದ ಮೇಲೆ ಅಪಾರ ಪರಿಣಾಮ ಬೀರುವ ಚಂಡಮಾರುತದಿಂದ ಉಂಟಾಗುವ ಉಬ್ಬರವಿಳಿತ ಮತ್ತು ಚಂಡಮಾರುತಗಳಿಗೆ ಪ್ರಾಕೃತಿಕ ತಡೆಗೋಡೆಗಳಾಗಿ ವರ್ತಿಸುವುದೂ ಸೇರಿದಂತೆ ಕರಾವಳಿಯ ಪರಿಸರದ ಮೇಲೆ ಕಾಡಿನಲ್ಲಿರುವ ಅನೇಕ ಬಗೆಯ ಕಾಂಡ್ಲಾ  ಮರಗಳು ಬಹುಮುಖ್ಯ ಪಾತ್ರ ವಹಿಸುತ್ತವೆ. ಒಳ್ಳೆಯ ಕಾಂಡ್ಲಾ ಮರಗಳಿಂದ ಸಾಮಾಜಿಕ ಮತ್ತು ಪಾರಿಸರಿಕ ಪುನರುಜ್ಜೀವನ ಶಕ್ತಿ ಹೆಚ್ಚುತ್ತದೆ.

1985ರಲ್ಲಿ ದೇವಿ ನದಿ ಮುಖ ಪ್ರದೇಶದಲ್ಲಿ ಕಾಂಡ್ಲಾ ಅರಣ್ಯವು ಸುಮಾರು 2.58 ಚದರ ಕಿಲೋಮೀಟರ್‌ನಷ್ಟಿತ್ತು. 1997ರಲ್ಲಿ ಬೀಸಿದ ಸೈಕ್ಲೋನ್ ಪರಿಣಾಮ, ಅದು 2 ಚ.ಕೀ.ಮೀ.ಗಿಂತಲೂ ಕಡಿಮೆ ಪ್ರದೇಶಕ್ಕಿಳಿಯಿತು. 1999ರಲ್ಲಿ ಬಂದ ಮಹಾ ಚಂಡಮಾರುತದಲ್ಲಿ ಉಳಿದ ಕಾಂಡ್ಲಾ ಅರಣ್ಯ ಅಲ್ಪಸ್ವಲ್ಪ ಮಾತ್ರ. ಇದರಿಂದಾಗಿ ಮಣ್ಣಿನಲ್ಲಿ ಕ್ಷಾರತೆ ಅಧಿಕವಾಯಿತು (15 ಪಾರ್ಟ್ಸ್ ಪರ್ ಮಿಲಿಯನ್ ವರೆಗೆ) ಮತ್ತು ಕೃಷಿ ಉತ್ಪಾದನೆ ಕುಸಿತಗೊಂಡಿತು. ಅದುವರೆಗೆ ಖಚಿತವಾಗಿ ಸುತ್ತಲಿನ ಅರಣ್ಯ ಸಂರಕ್ಷಣೆ ಅರಿವು ಇರದಿದ್ದ ಗ್ರಾಮಸ್ಥರು, ನಂತರ ಮಣ್ಣಿನ ಕ್ಷಾರತೆ ತಡೆಗಟ್ಟಲು, ಭವಿಷ್ಯದ ಪ್ರಾಕೃತಿಕ ವಿಕೋಪಗಳ ತೀವ್ರತೆ ಕಡಿಮೆ ಮಾಡಲು ಮತ್ತು ತಮ್ಮ ಜೀವನಾಧಾರದ ಸಾಮರ್ಥ್ಯ ಹೆಚ್ಚಿಸಲು ಆ ಕಾರ್ಯಕ್ಕೆ ಮುಂದಾದರು.

### ಜೀವಾವರಣ ಸಂರಕ್ಷಣೆಗೆ ಮಹಿಳಾ ಸಮಿತಿಗಳು

ಬಹುಮುಖ ಸವಾಲು ನಡುವೆಯೂ ಈ ಏಳು ಗ್ರಾಮಗಳ ಮಹಿಳಾ ಸಮಿತಿಗಳು ಅರಣ್ಯ ಮತ್ತು ಕರಾವಳಿ ಜೀವ ವೈವಿಧ್ಯ ಸಂರಕ್ಷಣೆಗೆ ಅನೇಕ ಉಪಕ್ರಮಗಳನ್ನು ತೆಗೆದುಕೊಂಡಿತು. ಕ್ಯಾಸುಯರಿನಾ ಅರಣ್ಯ ಸೇರಿದಂತೆ ಸುತ್ತಮುತ್ತಲಿನ ಅರಣ್ಯ, ಅದಕ್ಕೆ ಹೊಂದಿಕೊಂಡ ಅರಣ್ಯ ಪ್ರದೇಶ ಮತ್ತು ಇತರೆ ಪ್ರಾಕೃತಿಕ ಸಂಪತ್ತನ್ನು ಸಂರಕ್ಷಿಸಲು ಅನೇಕ ಮಹಿಳೆಯರು ಮುಂದೆ ಬಂದರು. ಈ ಸಾಮಾಜಿಕ ಕ್ರಾಂತಿ 2000ರಲ್ಲಿ ಪ್ರಾರಂಭವಾಯಿತು. ಸಿಸಿಐಗಳಿಂದ ಆ ಪ್ರದೇಶದ ಶ್ರೀಮಂತ ಜೈವಿಕ ವೈವಿಧ್ಯ ಸಂರಕ್ಷಣೆ ಮತ್ತು ಪೋಷಣೆಯ ಧನಾತ್ಮಕ ಪರಿಣಾಮ ಎದ್ದು ಕಾಣಿಸುತ್ತದೆ. ಉದಾ: ಪ್ರತಿಯೊಂದು ಹಳ್ಳಿಯ ಮಹಿಳೆಯರು ಸಮುದಾಯ ಅರಣ್ಯ ರಕ್ಷಣಾ ಗುಂಪು ಅಥವಾ ಸಮಿತಿಯನ್ನು ರಚಿಸಿ, ತೆಂಗಪಲ್ಲಿ ಅಥವಾ ಹತ್ತಿರದ ಕಾಡುಗಳಲ್ಲಿ ಗಸ್ತು ತಿರುಗುವುದನ್ನು ಅಳವಡಿಸಿಕೊಂಡಿದೆ. ಕ್ಷಾರ ಮಾರುತ ಮತ್ತು ಮರಳಿನ ಕಣಗಳು ಹಳ್ಳಿಗಳನ್ನು ಪ್ರವೇಶಿಸುವುದನ್ನು ತಡೆಯುವುದಕ್ಕಾಗಿ, ಅವರು ಯಶಸ್ವಿಯಾಗಿ 15 ಚ.ಕೀ ಕ್ಯಾಸುಯಾರಿನಾ ಅರಣ್ಯವನ್ನು ಪುನರುಜ್ಜೀವನಗೊಳಿಸಿದ್ದಾರೆ.

ಗುಂಡಾಲ್ಬಾ ಹಳ್ಳಿಯ ಮಹಿಳೆಯರು ಸಿಸಿಐಗಳ ಮಂಚೂಣಿಯಲ್ಲಿದ್ದು, ಪೀರ್ ಜಹಾನಿಯಾ ಜಂಗಲ್ ಸುರಖ್ಯಾ ಮಹಿಳಾ ಸಮಿತಿಯನ್ನು ಕ್ರಿ.ಶ.2000ರಲ್ಲಿ ಪ್ರಾರಂಭಿಸಿದ್ದಾರೆ. ಆ ಹಳ್ಳಿಯಲ್ಲಿ 60 ಮನೆಗಳಿದ್ದು, ಪ್ರತಿ ಮನೆಯಿಂದ ಒಬ್ಬ ಮಹಿಳೆ ಪೀರ್ ಜಹಾನಿಯಾ ಮಹಿಳಾ ಸಮಿತಿ ಸದಸ್ಯೆ. ಅರವತ್ತು ಸದಸ್ಯರ ಈ ಬಲವಾದ ಅಡಿಪಾಯದ ಆಧಾರದ ಮೇಲೆ, ಸಮಿತಿ ರೊಟೇಶನಲ್ ಆಧಾರದ ಮೇಲೆ, ಕಾಡನ್ನು ರಕ್ಷಿಸಲು, ಸಾಂಪ್ರದಾಯಿಕವಾಗಿ ನಿಗದಿಪಡಿಸಿದ ವ್ಯಾಪ್ತಿಯೊಳಗೆ ಒಂದು ಬಾರಿಗೆ ಇಬ್ಬರು ಅಥವಾ ನಾಲ್ಕು ಮಹಿಳೆಯರು ಗಸ್ತು ತಿರುಗುತ್ತಾರೆ. ಅರಣ್ಯದ ಗಡಿ ರೇಖೆಗಳನ್ನು ಹಳ್ಳಿಗಳು ಪರಸ್ಪರ ಗುರುತಿಸಿಕೊಂಡಿವೆ.

ಅವರ ತಿಂಗಳ ಸಭೆಗಳಲ್ಲಿ, ಅರಣ್ಯ ನಿರ್ವಹಣೆಗೆ ಸಮಿತಿ ನಿರ್ಣಯಗಳನ್ನು ರಚಿಸಿ ಅಂಗೀಕರಿಸುತ್ತವೆ. ಮಹಿಳಾ ಸಮಿತಿಯ ಅಧ್ಯಕ್ಷೆ ಅಥವಾ ಕಾರ್ಯದರ್ಶಿ ಸಭೆಯ ಅಧ್ಯಕ್ಷತೆ ವಹಿಸಲಿದ್ದು, ಅರಣ್ಯ ಅಧಿಕಾರಿಗಳನ್ನು ವಿಶೇಷ ಅತಿಥಿಗಳನ್ನಾಗಿ ಆಹ್ವಾನಿಸಲಾಗಿರುತ್ತದೆ. ಸಮಿತಿಯ ಮೂರನೇ ಎರಡರಷ್ಟು ಸದಸ್ಯರು ಒಪ್ಪಿಗೆ ನೀಡಿದ ಮೇಲೆಯೇ ನಿರ್ಣಯಗಳನ್ನು ಅಂಗೀಕರಿಸಲಾಗುತ್ತದೆ. ನಿರ್ಣಯ ಅಂಗೀಕರಿಸಿದ ನಂತರ ಅದನ್ನು ಗ್ರಾಮಸ್ಥರೊಂದಿಗೆ ಪಲ್ಲಿಸಭಾ (ಗ್ರಾಮಸಭೆ) ಸಭೆಯಲ್ಲಿ ಹಂಚಿಕೊಳ್ಳಲಾಗುತ್ತದೆ. ಉದಾ: ಅರಣ್ಯದಿಂದ ಉರುವಲು ಸಂಗ್ರಹಿಸಲು ಎಲ್ಲಾ 60 ಮನೆಗಳಿಗೆ ತಿಂಗಳಲ್ಲಿ ಒಂದು ದಿನ ನಿಗದಿಮಾಡಲಾಗುತ್ತದೆ. ಅದೇ ರೀತಿ, ಮತ್ತೊಂದು ದಿನ (ಸಾಮಾನ್ಯವಾಗಿ ಗುಂಡಾಲ್ಬಾ ಹಳ್ಳಿಯ ಜನತೆ ಉರುವಲು ಸಂಗ್ರಹಿಸಿದ ಮೂರ್‍ನಾಲ್ಕು ದಿನಗಳ ನಂತರ) ಅದೇ ವ್ಯಾಪ್ತಿಯಲ್ಲಿ ಬರುವ ಇನ್ನೊಂದು ಹಳ್ಳಿ ಉರುವಲನ್ನು ಸಂಗ್ರಹಿಸಲು ನಿರ್ಧರಿಲಾಗುತ್ತದೆ. ಅರಣ್ಯ ಸಂರಕ್ಷಣೆ ನೀತಿ ಮತ್ತು ನಿಯಮಗಳು ಏಳು ಗ್ರಾಮಗಳು ಪರಸ್ಪರ ಒಪ್ಪಂದದಿಂದ ಮಾಡಿರುತ್ತವಾದ್ದರಿಂದ, ಇದರಲ್ಲಿ ಸಂಘರ್ಷ ಅಥವಾ ವಿವಾದ ಇರುವುದಿಲ್ಲ. ಗುಂಡಾಲ್ಬಾ ಹೊರಗಿನವರಿಗೆ ಈ ಸವಲತ್ತು ನೀಡಲಾಗುತ್ತದೆ, ಆದರೆ ಅವರಲ್ಲಿ ಬಹಳಷ್ಟು ಜನ ಮಹಿಳಾ ಸಮಿತಿಗಳ ಸ್ಥಾಪನೆಗೆ ಮೊದಲು ಮಾಡುತ್ತಿದ್ದಂತೆ ಮರಗಳನ್ನು ಕಡಿಯುವುದನ್ನು ನಿಗ್ರಹಿಸಲಾಗಿದೆ. ಆ ದಿನ ಹೊರತುಪಡಿಸಿ ತಿಂಗಳಲ್ಲಿ ಉಳಿದ ಯಾವುದೇ ದಿನ ಅರಣ್ಯದಿಂದ ಯಾರೂ ಉರುವಲನ್ನು ಸಂಗ್ರಹಿಸುವಂತಿಲ್ಲ. ಸಮಿತಿಯ ನಿರ್ಣಯಗಳನ್ನು ಗ್ರಾಮಸ್ಥರು ಗೌರವಿಸಿ, ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ನಿಯಮ ಮೀರಿದವರಿಗೆ ಸಮಿತಿ ಹಲವು ಹಂತಗಳ ದಂಡಗಳನ್ನೂ ನಿಗದಿಪಡಿಸಿದೆ. ಉದಾ: ಗಸ್ತು ತಿರುಗುವ ತನ್ನ ಕರ್ತವ್ಯವನ್ನು ಯಾವುದೇ ಸದಸ್ಯೆ ಮಾಡದಿದ್ದರೆ, ಅವರು 50 ರೂಪಾಯಿ ದಂಡ ನೀಡಬೇಕು. ಯಾರಾದರೂ ಮರಗಳನ್ನು ಕಡಿಯುವ ಅಥವಾ ತಿಂಗಳ ಉಳಿದ ದಿನ ಉರುವಲು ಸಂಗ್ರಹಿಸಿದರೆ ಅಂಥವರು 200 ರೂಪಾಯಿ ದಂಡ

ತೆರಬೇಕಾಗುತ್ತದೆ. ಸಣ್ಣ ಪುಟ್ಟ ಉಲ್ಲಂಘನೆಗಳಿಗೆ ಕಠಿಣ ಎಚ್ಚರಿಕೆ ನೀಡಲಾಗುತ್ತದೆ.

ಸಮುದಾಯ ಸದಸ್ಯರ ಬಲವಾದ ಸಮಿತಿಯಿಂದ ಜೀವಾವರಣದ ಮೇಲೆ ಅತ್ಯಂತ ವೇಗವಾಗಿ ಧನಾತ್ಮಕ ಪರಿಣಾಮಗಳಾಗಿವೆ. 1999ರಲ್ಲಿ ವ್ಯಾಪಕ ವಿನಾಶದಿಂದ ಉಪಕ್ರಮಗಳು ಆರಂಭವಾಗಿದ್ದು, ಹೊಸದಾಗಿ ಬೆಳೆಸಿದ ಕಾಂಡ್ಲಾ ಮರಗಳು ಮತ್ತು ಅರಣ್ಯ (ವಿಶೇಷವಾಗಿ ಕಾಂಡ್ಲಾ) ಶೇ.63ರಷ್ಟು ಹೆಚ್ಚಳವನ್ನು ಕಂಡಿದೆ. ಮಹಾಚಂಡಮಾರುತವು ಎಲ್ಲ ಕಾಂಡ್ಲಾ ಮರಗಳನ್ನು ಸಂಪೂರ್ಣ ನಾಶ ಮಾಡಿದ ನಂತರವೂ, 1985ರಲ್ಲಿ 2.58 ಚ.ಕೀ. ನಷ್ಟಿದ್ದ ಅರಣ್ಯ 2004ರ ಹೊತ್ತಿಗೆ 4.21 ಚ.ಕೀ.ನಷ್ಟಾಗಿದೆ. ನೈಸರ್ಗಿಕ ಪುನರುಜ್ಜೀವನದಿಂದ ಮತ್ತು ಸ್ಥಳೀಯ ಸಮುದಾಯಗಳ ಒಟ್ಟು ಪ್ರಯತ್ನದಿಂದ ಇದು ಸಾಧ್ಯವಾಗಿದೆ. ಕಾಂಡ್ಲಾ ಮರಗಳು ಹಲವಾರು ಸ್ಥಳೀಯ ಮತ್ತು ವಲಸೆ ಹಕ್ಕಿಗಳನ್ನು ಆಕರ್ಷಿಸಿದೆ. ಈಗ ಅದೂ

> **ತಮ್ಮ ಸಂರಕ್ಷಣಾ ಉಪಕ್ರಮಗಳಿಗೆ ಕಾನೂನಿನ ಮನ್ನಣೆ ದೊರೆಯಬೇಕು ಎಂದು ಸಮುದಾಯಗಳು ಆಗ್ರಹಿಸುತ್ತಿವೆ. ಭಾರತೀಯ ಕಾನೂನು ಮತ್ತು ನೀತಿಗಳಲ್ಲಿ ನೀಡಲಾದ ಅವಕಾಶಗಳು, ಸಮುದಾಯದ ಹಕ್ಕುಗಳನ್ನು ನಿರಾಕರಿಸುತ್ತದೆ.**

ಒಂದು ಪ್ರವಾಸಿ ತಾಣ. ಎಲ್ಲಕ್ಕಿಂತ ಮುಖ್ಯವಾಗಿ, ಪ್ರಾಕೃತಿಕ ವಿಪತ್ತುಗಳಿಂದ ಈ ಮ್ಯಾನ್‌ಗ್ರೋವ್ ಅರಣ್ಯ, ತಡೆಗೋಡೆಯಂತೆ ರಕ್ಷಿಸುತ್ತದೆ.

ಸುಸಂಘಟಿತ ಸಾಮಾಜಿಕ ಸಂಘಟನೆ ಕಾಡನ್ನು ಪುನರುಜ್ಜೀವನಗೊಳಿಸಿದ ಜೊತೆಗೆ, ಮಹಿಳಾ ಸಮಿತಿಗಳ ಉಪಕ್ರಮಗಳು ಸ್ಥಳೀಯ ಮತ್ತು ನೆರೆಯ ಹಳ್ಳಿಗಳ ಯುವಕರು ಮತ್ತು ಮಕ್ಕಳ ಮೇಲೆ ಪ್ರಭಾವ ಬೀರಿದೆ. (1972ರ ವೈಲ್ಡ್‌ಲೈಫ್ ಪ್ರೊಟೆಕ್ಷನ್ ಆಕ್ಟ್ 13ರಲ್ಲಿ, ಅನುಸೂಚಿತ ಒಂದರ ಪಂಗಡಕ್ಕೆ ಸೇರಿದ) ಆಲಿವ್ ರಿಡ್ಲೇ ಆಮೆಗಳ ಸಂತಾನಾಭಿವೃದ್ಧಿ ಸಮಯದಲ್ಲಿ ರಕ್ಷಣೆಗೆ ಸ್ಥಳೀಯ ಯುವಕರು ಗುಂಪುಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಸಂತಾನಾಭಿವೃದ್ಧಿ ಕಾಲಕ್ಕೆ ನಿರ್ಬಂಧಿತ ಪ್ರವಾಸೋದ್ಯಮದ ಮೂಲಕ ಒಂದಷ್ಟು ಆದಾಯ ಗಳಿಸಲು ಮಹಿಳಾ ಸಮಿತಿ ವ್ಯಾಖ್ಯಾನ ಮತ್ತು ಕಲಿಕಾ ಕೇಂದ್ರವನ್ನು ರಚಿಸಿದೆ. ಪ್ರವಾಸಿಗಳಿಗೆ ಪರಿಸರ ಸ್ನೇಹಿ ವಾತಾವರಣ ಕಲ್ಪಿಸಲು ಮತ್ತು ಸಂಗ್ರಹಿಸಿದ ಕಸವನ್ನು ವರ್ಗೀಕರಿಸಿ, ವನ್ಯಜೀವಿಗಳಿಗೆ ಸೂಕ್ತ ಸ್ಥಳೀಯ ಯುವಕರನ್ನೂ ಜೋಡಿಸಿಕೊಳ್ಳಲಾಗಿದೆ. ಕೊಳೆಯಬಲ್ಲ ಕಸವನ್ನು ಸಾವಯವ ಗೊಬ್ಬರವನ್ನಾಗಿ ಮಾಡಿ, ಕೃಷಿಗೆ ಉಪಯೋಗಿಸಿಕೊಳ್ಳಲಾಗುತ್ತದೆ. ಆದರೆ ತಾಂತ್ರಿಕ ಜ್ಞಾನ ಮತ್ತು ಸಹಾಯದ ಕೊರತೆಯಿಂದ ಕೊಳೆಯಲಾರದ ಕಸವನ್ನು ಏನೂ ಮಾಡಲಾಗುತ್ತಿಲ್ಲ. ಸಂತಾನೋತ್ಪತ್ತಿ ಕಾಲದಲ್ಲಿ ಆಮೆಗಳನ್ನು ಗ್ರಾಮಸ್ಥರು ಕೇವಲ ರಕ್ಷಿಸುವುದಷ್ಟೇ ಅಲ್ಲ, ಅತಿವೇಗವಾಗಿ ವಿನಾಶವಾಗುತ್ತಿರುವ ಅವುಗಳನ್ನು ರಕ್ಷಿಸಲು ಸಂತಾನಾಭಿವೃದ್ಧಿ ಕಾಲದಲ್ಲಿ ವಿಶೇಷ ಮೀನುಗಾರಿಕಾ ನಿಯಮಗಳನ್ನು ಹಾಕಿಕೊಂಡಿದ್ದಾರೆ.

ಯುವಕ ಸಂಘಗಳು ಮತ್ತು ಮಹಿಳಾ ಸಮಿತಿ, ಜೊತೆಗೆ ಸಮಾಜದ ಹಿರಿಯರು ಮತ್ತು ಇತರರು, ಇತ್ತೀಚಿನ ದಿನಗಳಲ್ಲಿ ಪರಿಸರ ಸಂರಕ್ಷಣೆಗೂ ಮಿಗಿಲಾಗಿ, ಕರಾವಳಿ ಜೀವಾವರಣವನ್ನು ಸಮಗ್ರವಾಗಿ ರಕ್ಷಿಸುವ ಮೂಲಕ ಹಳ್ಳಿಯ ಸುಸ್ಥಿರ ಅಭಿವೃದ್ಧಿಯ ಚಿಂತನೆಗಳನ್ನು ಮಾಡತೊಡಗಿದ್ದಾರೆ. ಸಾರ್ವಜನಿಕರ ಜೈವಿಕ ವೈವಿಧ್ಯ ದಾಖಲೆ ಅಭಿವೃದ್ಧಿಪಡಿಸಲು, ಸಮುದಾಯ ನಿರ್ವಹಣೆ ಯೋಜನೆಗಳನ್ನು ತಾವೇ ಅಭಿವೃದ್ಧಿಪಡಿಸಲು ಒಟ್ಟಾಗಿದ್ದಾರೆ. ಮೇಲೆ ಉಲ್ಲೇಖಿಸಿದ ಎಲ್ಲ ಚಟುವಟಿಕೆಗಳೂ ದೇವಿ ನದಿಮುಖದಲ್ಲಿ ಸಾಮಾಜಿಕ ಪುನರುತ್ಥಾನ ಮತ್ತು ಜೈವಿಕ ವೈವಿಧ್ಯ ಪೋಷಿಸುವ ಸಾಮೂಹಿಕ ಗುರಿ ಸಾಧಿಸುವೆಡೆಗೆ ಸಿಸಿಐಗಳ ಸಂಘಟನಾ ಪ್ರಯತ್ನಕ್ಕೆ ನಿದರ್ಶನ.

## ಸವಾಲುಗಳು

ಕಾನೂನಾತ್ಮಕ ಭದ್ರತೆ ಕೊರತೆ ಸಮುದಾಯದ ಸಂರಕ್ಷಣಾ ಉಪಕ್ರಮಗಳನ್ನು ಕಡೆಗಣಿಸುತ್ತವೆ. ಮ್ಯಾನ್‌ಗ್ರೋವ್ ಮತ್ತು ಕ್ಯಾಸುಯರಿನಾ ಮತ್ತೆ ಬೆಳೆಸಲು ಹಲವು ವರ್ಷಗಳ ಕಾಲ ಒಟ್ಟು ಪ್ರಯತ್ನ ಹಾಕಿದ ನಂತರ, ಅದೊಂದು ಸರ್ಕಾರಿ ಆಸ್ತಿ ಎಂದು ಅರಣ್ಯ ಇಲಾಖೆ ಪರಿಗಣಿಸಿ, ಜನರ ಸಂಚಾರ ಮತ್ತು ಸಂಪನ್ಮೂಲ ಬಳಕೆಯನ್ನು ನಿಷೇಧಿಸಿರುವುದರಿಂದ ಜನರಲ್ಲಿ ತಾವು ಮೋಸಕ್ಕೊಳಗಾಗಿದ್ದೇವೆ ಎನ್ನುವ ಭಾವನೆ ಮೂಡಿದೆ.

ಜುಲೈ 2010ರಲ್ಲಿ, ಒಂದು ಭಾಗವನ್ನು ಅರಣ್ಯ ಇಲಾಖೆ ಕ್ಯಾಸುಯರಿನಾ ಮರಗಳನ್ನು ಕತ್ತರಿಸಲು ಒರಿಸ್ಸಾ ಅರಣ್ಯ ಅಭಿವೃದ್ಧಿ ನಿಗಮಕ್ಕೆ ಭೋಗ್ಯ ನೀಡಿದೆ. ಕಾಡನ್ನು ರಕ್ಷಿಸುತ್ತಿರುವ ಮಹಿಳಾ ಸಮಿತಿಗಳು ಉಗ್ರವಾಗಿ ವಿರೋಧಿಸಿ, ಕೊಡಲಿಗಳನ್ನು ಮರಗಳಿಂದ ತೆಗೆದು ಮರಗಳನ್ನು ಅಪ್ಪಿಕೊಂಡು ತಮ್ಮ ಜೀವನಾಧಾರಕ್ಕೆ ಬೆಲೆ ಕಟ್ಟಲಾಗದ ಮತ್ತು ಪ್ರಾಕೃತಿಕ ವಿಕೋಪಗಳಿಗೆ ಬಲವಾದ ತಡೆಗೋಡೆಯಾದ ಮರಗಳನ್ನು ರಕ್ಷಿಸಿವೆ. ಮರಗಳನ್ನು ಕಡಿಯಲು ಗ್ರಾಮಸ್ಥರ ಅಪಾರ ವಿರೋಧದ ನಡುವೆಯೂ ಮರಗಳನ್ನು ಕಡಿಯುವ ಕಾರ್ಯ ಮುಂದುವರಿದಿದೆ. ಕರಾವಳಿ ಚಂಡಮಾರುತಕ್ಕೆ ಮತ್ತು ಪ್ರಾಕೃತಿಕ ವಿಕೋಪಗಳಿಗೆ ತೆರೆದಿಟ್ಟುಕೊಂಡಿರುವ ಈ ಸೂಕ್ಷ್ಮ ಸಂದರ್ಭದಲ್ಲಿ ಈ ಕಾರ್ಯಾಚರಣೆ ನಡೆದಿದೆ. (ಜುಲೈ– ಆಗಸ್ಟ್) ಮತ್ತು ಕೇವಲ 8–10 ಸಾಲು ಕ್ಯಾಸುಯರಿನಾ ಮಾತ್ರ ಉಳಿದಿದೆ; ಇದಕ್ಕೆ ಕ್ಷಾರ ಮಾರುತ ಅಥವಾ ಚಂಡಮಾರುತದಿಂದ ಹಳ್ಳಿಯನ್ನು ತಡೆಗಟ್ಟುವ ಸಾಮರ್ಥ್ಯವಿಲ್ಲ ಎಂದು ಗ್ರಾಮಸ್ಥರು ಅನಿಸಿಕೆ. ಚಂಡಮಾರುತ ಅಥವಾ ಬಿರುಗಾಳಿಗೆ ಈ ಗಿಡಗಳು ಉಳಿಯುವುದರ ಬಗ್ಗೆಯೂ ಗ್ರಾಮಸ್ಥರು ಅನುಮಾನ ಪಡುತ್ತಿದ್ದಾರೆ.

ಅದಷ್ಟೇ ಅಲ್ಲ, ಕರಾವಳಿ ತೀರದ 50 ಮೀಟರ್ ಒಳಗಿನ ಹಳ್ಳಿ ಡಾಲುಕನಿಯ 20 ಎಕರೆ ಪ್ರದೇಶದಲ್ಲಿ ಸಸಿನೆಡುವ ಕಾರ್ಯಕ್ರಮವನ್ನು ಅರಣ್ಯ ಇಲಾಖೆ ಹಮ್ಮಿಕೊಂಡಿದೆ. ಈ ಪ್ರದೇಶ ಆಲಿವ್ ರಿಡ್ಲೇ ಆಮೆಗಳು ಮೊಟ್ಟೆ ಹಾಕಲು 200 ಮೀಟರ್ ಓಡಾಡುವ ಸ್ಥಳ. ಇದರಿಂದ ಪರಿಶಿಷ್ಟ (ಷೆಡ್ಯೂಲ್) ಒಂದರಲ್ಲಿ ವಿನಾಶದ ಅಂಚಿನಲ್ಲಿರುವ ಪ್ರಾಣಿ ಎಂದು ಗುರುತಿಸಿಕೊಂಡು ಉನ್ನತ ಕಾನೂನಾತ್ಮಕ ರಕ್ಷಣೆಯಲ್ಲಿರುವ ಆಮೆಗಳು ಮೊಟ್ಟೆ ಹಾಕುವ ಜಾಗ ಹಾಳಾಗುವುದರಲ್ಲಿ ಅನುಮಾನವೇ ಇಲ್ಲ.

ಅರಣ್ಯ ಇಲಾಖೆಯ ಕ್ರಮಗಳಿಂದ ಹತಾಶೆಗೊಂಡಿರುವ ಈ ಸಮುದಾಯಗಳು ಈಗ ತಾವೇ ಮುಂದಾಗಿ ಸಂರಕ್ಷಿಸಿರುವ ಉಪಕ್ರಮಗಳಿಗೆ ಕಾನೂನಿನ ಮನ್ನಣೆ ಬೇಕೆಂದು ಕೇಳುತ್ತಿವೆ. ಅನೇಕ ತಲೆಮಾರುಗಳಿಂದ ಅವಲಂಬಿತವಾಗಿರುವ ಅರಣ್ಯ ಭೂಮಿ ಮತ್ತು ಅರಣ್ಯ ಸಂಪತ್ತಿನ ಅರಣ್ಯ ಕಾಯ್ದೆ ಅಡಿಯಲ್ಲಿ ಸಾಮುದಾಯಿಕ ಹಕ್ಕುಗಳನ್ನು ಕೇಳಲು ಮುಂದಾಗಿದ್ದಾರೆ. ಸಾಂಪ್ರದಾಯಿಕವಾಗಿ ಅವರು ಮಾಡುತ್ತಾ ಬಂದಿರುವ, ತಮ್ಮ ಸಮುದಾಯ ಅರಣ್ಯ ಸಂಪತ್ತನ್ನು ರಕ್ಷಿಸಲು, ಬೆಳೆಸಲು ಮತ್ತು ನಿರ್ವಹಿಸಲು ತಮಗಿರುವ ಹಕ್ಕಿಗೆ ಮಾನ್ಯತೆ ನೀಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಈ ಮನ್ನಣೆಯಿಂದ ಕರಾವಳಿ ಸಂಪತ್ತು ಮತ್ತು ಜೀವಾವರಣವನ್ನು ಉತ್ತಮವಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ ಎನ್ನುವುದು ಅವರ ಬಲವಾದ ನಂಬಿಕೆ.



**ಹಸಿರು ಸೇನಾನಿಗಳು: ಪ್ರತಿಕೂಲಗಳ ವಿರುದ್ಧ ಬಲವಾಗಿ ನಿಂತವರು**

ಇದರ ಜೊತೆಗೆ, ಕರಾವಳಿಯ ಭೂಮಿ ಮತ್ತು ನೀರಿನ ಮೇಲೆ ಅವಲಂಬಿತವಾಗಿರುವ ಮೀನುಗಾರರ ಹಾಗೂ ಕರಾವಳಿಯ ಇತರ ಸಮುದಾಯಗಳ ಸಾಂಪ್ರದಾಯಿಕ ಹಕ್ಕುಗಳಿಗೆ ಮಾನ್ಯತೆ ನೀಡುವ ಯಾವುದೇ ಕಾಯ್ದೆ ಅಥವಾ ವಿಚಾರ ನೀತಿ (policy) ಭಾರತದಲ್ಲಿ ಇಲ್ಲ.

## ಸೂಕ್ತ ಮಾನ್ಯತೆ ಮತ್ತು ಬೆಂಬಲದ ಅವಶ್ಯಕತೆ

ಜೀವವೈವಿಧ್ಯದ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆಗೆ, ಈ ಸಂಪನ್ಮೂಲದ ಮೇಲೆ ನೇರವಾಗಿ ಅವಲಂಬಿತವಾಗಿರುವ ಸ್ಥಳೀಯ ಸಮುದಾಯಗಳು ನಿರ್ಣಯ ಕೈಗೊಳ್ಳುವಲ್ಲಿ ಮತ್ತು ಆಡಳಿತದಲ್ಲಿ ಪರಿಣಾಮಕಾರಿ ಭಾಗವಹಿಸುವಿಕೆಯ ಅಗತ್ಯವಿದೆ. ದೇವಿ ನದಿಮುಖದಲ್ಲಿ ಮಹಿಳಾ ಸಮಿತಿಗಳ ಉಪಕ್ರಮಗಳು, ಸಿಸಿಐಗೆ ಸೂಕ್ತ ಬೆಂಬಲ ಮತ್ತು ಮಾನ್ಯತೆ ಅವಶ್ಯಕತೆ ಇದೆ ಎಂಬುದಕ್ಕೆ ನಿದರ್ಶನ. ಸಾಂಪ್ರದಾಯಿಕ ಮೀನುಗಾರರು ಮತ್ತು ಕರಾವಳಿ ಸಮುದಾಯಗಳ ಸಿಸಿಐಗಳಿಗೆ ತಮ್ಮ ಜೀವನಾಧಾರ ನಡೆಸಿಕೊಂಡು ಹೋಗಲು ವಿಶೇಷವಾಗಿ ಮಾನ್ಯತೆ ಮತ್ತು ಹಕ್ಕನ್ನು ನೀಡುವ ಪ್ರತ್ಯೇಕ ಕಾಯ್ದೆಯಿಂದ ಸಂರಕ್ಷಣೆ ಮತ್ತು ಜೈವಿಕ ವೈವಿಧ್ಯದ ಸುಸ್ಥಿರ ಬಳಕೆ ಸಾಧ್ಯ. ಜೈವಿಕ ವೈವಿಧ್ಯದ ಮೇಲೆ ವಿಶ್ವಸಂಸ್ಥೆಯ ಸಮಾವೇಶ, ವಿಶೇಷವಾಗಿ ಸ್ಥಳೀಯ ಜನರ, ಸಮುದಾಯಗಳು ಹಾಗೂ ಸಾಂಪ್ರದಾಯಿಕ ಜ್ಞಾನ ಮತ್ತು ಜೀವನಶೈಲಿ ರಕ್ಷಣೆ ಮತ್ತು ನೆರವಿನ ಕುರಿತಾದ ಕಲಂ 8(ಜೆ) ಮತ್ತು 10 (ಸಿ), ಈಡೇರಿಸುವ ಮೂಲಕ ಭಾರತದ ಕರ್ತವ್ಯಗಳಿಗೆ ಪೂರೈಸಲು ಸಹಾಯ ಮಾಡಿದಂತೆಯೂ ಆಗುತ್ತದೆ. ಇಂಥ ಕಾಯ್ದೆಯನ್ನು ಜಾರಿಗೊಳಿಸಲು ಕರಾವಳಿ ನಿರ್ವಹಣೆಯನ್ನು ಅಭಿವೃದ್ಧಿಪಡಿಸಿ, ಜಾರಿಗೊಳಿಸಿ, ನಿಗಾ ವಹಿಸಲು ಗ್ರಾಮಸಭೆಗಳಿಗೆ ಅಧಿಕಾರ ನೀಡಬೇಕು. ಮತ್ತು ಸ್ಥಳೀಯ ಗ್ರಾಮಪಂಚಾಯಿತಿಗಳಿಗೆ ಅಕ್ರಮಗಳ ವಿರುದ್ಧ ಕ್ರಮ ಕೈಗೊಳ್ಳುವ ಅಧಿಕಾರ ನೀಡಬೇಕು. ಜೊತೆಗೆ ಇನ್ನೊಂದು ಮಹತ್ವವಾದ ಅಂಶವೆಂದರೆ, ಸಂರಕ್ಷಣೆಗೆ ಅವಶ್ಯಕವಾದ ತಾಂತ್ರಿಕ ಜ್ಞಾನ ಮತ್ತು ಆರ್ಥಿಕ ನೆರವು ನೀಡಬೇಕು. ಜೊತೆಗೆ ಸುಸ್ಥಿರ ಜೀವನೋಪಾಯದ ಆಯ್ಕೆಗಳನ್ನು ಪ್ರಚುರಪಡಿಸಬೇಕು. ಜನ ಕೇಂದ್ರಿತ ಅಭಿವೃದ್ಧಿಯಾದ ಇದನ್ನು ಸಮಗ್ರ ಅಭಿವೃದ್ಧಿ ಎನ್ನಬಹುದು.

◆

***'ಹಸಿರು ಸೇನಾನಿಗಳು: ಒರಿಸ್ಸಾ, ಭಾರತದಲ್ಲಿ ಸ್ಥಳೀಯ ಜೈವಿಕ ವೈವಿಧ್ಯವನ್ನು ಸಾಮುದಾಯಿಕ ಸಂರಕ್ಷಣಾ ಉಪಕ್ರಮಗಳ ಮೂಲಕ ಸಂರಕ್ಷಣೆ' ಎನ್ನುವ 17,2010ರ ಪಾಲಿಸಿ ಮ್ಯಾಟರ್‌ನಲ್ಲಿ ಪ್ರಕಟವಾದ ಲೇಖನದಿಂದ ಆಯ್ದುಕೊಳ್ಳಲಾಗಿದೆ.***

■ **Sweta Mishra**
Team Leader, Technical Support Unit
Department of Sports and Youth Services
Government of Odisha
C-1 Nayapalli, Bhubaneswar
E-mail: swetamishra1@gmail.com

**ಆಂಗ್ಲ ಮೂಲ**
ಲೀಸಾ ಇಂಡಿಯಾ, ಸಂಪುಟ 16, ಸಂಚಿಕೆ 3, ಸೆಪ್ಟೆಂಬರ್ 2014